ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರ್ಗಿ, ಬಳ್ಳಾರಿ, ವಿಜಯನಗರ, ಬೀದರ, ಏಕಕಾಲಕ್ಕೆ ಪ್ರಕಟಣೆ
Raichur, Koppal, Yadagiri, Kalburgi, Ballary, Vijaya Nagar, Bidar

ಕನ್ನಡ
# ಮಾತೃ ಭೂಮಿ
ಕನ್ನಡದಿನ ಪತ್ರಿಕೆ
ರಾಯಚೂರಿನಿಂದ ರಾಜ್ಯದವರೆಗೆ

ಸಂಪಾಕದರು : ಶ್ಯಾಮ್ ಸುಂದರ್.ಎಲ್
EDITOR : SHYAM SUNDER L

KANNADA MATHRUBHOOMI
KANNADA DAILY PAPER

mathrubhoomircr@gmail.com
Call : 9886635117

ಸಂಪುಟ : 03 Volume : 03 | ಸಂಚಿಕೆ Issue : 175 | ದಿನಾಂಕ : 25-04-2026 Date : 25-04-2026 | ಶನಿವಾರ Saturday | RNI: Karkan/2023/89199 Post Reg No.: RCR/L/RNP/98/2025-2027 | ರಾಯಚೂರು Raichur | ಪುಟ : Pages : 04 | ರೂ Rs. 2

## ಒಳ ಮೀಸಲಾತಿ ಹಂಚಿಕೆಗೆ ಕ್ರಾಂತಿಕಾರಿ ನಿರ್ಣಯ

# ಎಗೆ 5.25%, ಬಿಗೆ 5.25%, ಸಿಗೆ 4.50%

## ಸಂಪುಟ ಸಭೆ ತೀರ್ಮಾನ

**ಬೆಂಗಳೂರು,ಏ.24-**ಎಸ್‌ಸಿ ಒಳಮೀಸ ಲಾತಿ ಸಂಬಂಧ ಇಂದು ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಎಗೆ 5.25%, ಬಿಗೆ 5 .25%, ಸಿಗೆ 4.50% ಒಳ ಮೀಸಲಾ ತಿ ನೀಡಲು ತೀರ್ಮಾನಿಸಲಾಗಿದೆ.

ಶೇ.17ರ ಎಸ್‌ಸಿ ಒಳಮೀಸಲಾತಿ ಅನ್ವಯ ಎಸ್‌ಸಿಯನ್ನು ಎ (ಬಲ), ಬಿ (ಎಡ) ಮತ್ತು ಸಿ (ಸ್ಪೃಶ್ಯರು) ಎಂದು ಮೂರು ವರ್ಗೀಕರಣ ಮಾಡಲಾಗಿದೆ. ಅದರಂತೆ ಒಳಮೀಸಲಾತಿ ಕಲ್ಪಿಸಲು ಸರ್ಕಾರ ನಿರ್ಧರಿಸಿದೆ.

ಈ ಕುರಿತು ಸಿಎಂ ಸಿದ್ದರಾಮಯ್ಯ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶೇ.17ರ ಎಸ್‌ಸಿ ಒಳಮೀಸಲಾತಿ ಅನ್ವಯ ಎಗೆ 5.25%, ಬಿಗೆ 5.25%, ಸಿಗೆ 4.50% ಒಳ ಮೀಸಲಾತಿ ನೀಡಲು ತೀರ್ಮಾನಿಸಿದ್ದೇವೆ. ಒಳಮೀಸಲಾತಿ ಬಗ್ಗೆ ಸಾಕಷ್ಟು ಹೋರಾಟ ನಡೆಯುತ್ತಿದೆ.



1-8-2024ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿ ಒಳಮೀಸಲಾತಿ ಮಾಡಬಹುದು ಎಂದು ಹೇಳಿತ್ತು. ಬಳಿಕ ನಾವು ನಾಗಮೋಹನ ದಾಸ್ ನೇತೃತ್ವದಲ್ಲಿ ಆಯೋಗ ರಚನೆ ಮಾಡಿದೆವು. ಅವರ ವರದಿಯನ್ನು ಸಂಪುಟದ ಮುಂದೆ ಇಟ್ಟು ಅನುಮೋದನೆ ನೀಡಲಾಗಿದೆ. ಸಂಪುಟ ಸಭೆಯಲ್ಲಿ 6:6:5ರಂತೆ ಒಳ ಮೀಸಲಾತಿ ನೀಡಲು ತೀರ್ಮಾನಿಸಲಾಗಿತ್ತು. ಈ ಸಂಬಂಧ ಕಾನೂನು ಮಾಡಲಾಯಿತು. ಕಾನೂನು ಮಾಡಿದ ಬಳಿಕ ರೋಸ್ಟರ್‌ನಲ್ಲಿ ಗೊಂದಲ ಉಂಟಾಯಿತು. ಇತ್ತ ಅಲೆಮಾರಿಯವರು ಕೋರ್ಟ್‌ಗೆ ಹೋದರು. ಕೋರ್ಟ್‌ನಲ್ಲಿ ಮೀಸಲಾತಿ 50% ಮೀರಬಾರದು ಎಂದು ತೀರ್ಪು ನೀಡಿತು. ಎಸ್‌ಸಿ (17%), ➘4

## ಹೊಸದಾಗಿ ರಚಿಸಲಾಗಿದ್ದ ಜಿಲ್ಲಾ ಮತ್ತು ತಾಲೂಕ ಪಂಚಾಯ್ತಿ ಕ್ಷೇತ್ರಗಳ ಅಧಿಸೂಚನೆ ಹಿಂಪಡೆದ ಸರ್ಕಾರ

# ಚುನಾವಣೆ ಮತ್ತೆ ಅತಂತ್ರ..!

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು, ಏ.24-**ಜಿಲ್ಲಾ ಮತ್ತು ತಾಲೂಕ ಪಂಚಾಯ್ತಿ ಚುನಾವಣೆಗಳು ಅನಿಶ್ಚಿತವಾಗಿರುವಾಗಲೇ 2023 ರಲ್ಲಿ ಕ್ಷೇತ್ರಗಳ ಪುನರ್ ವಿಂಗಡನೆ, ಹೊಸ ಕ್ಷೇತ್ರಗಳ ರಚನೆಯ ಅಧಿಸೂಚನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಿಂಪಡೆದಿದೆ.

ರಾಯಚೂರು ಸೇರಿದಂತೆ ಕಲ್ಬುರ್ಗಿ, ಬೆಳಗಾವಿ, ಚಿತ್ರದುರ್ಗ ಜಿಲ್ಲೆಗಳ ಸೀಮಾ ಗಡಿ ನಿಗಧಿಯಂತೆ ಹೊಸದಾಗಿ ರಚಿತವಾಗಿದ್ದ ಜಿಲ್ಲಾ ಮತ್ತು ತಾಲೂಕ ಪಂಚಾಯ್ತಿ ಚುನಾವಣೆಗಳು ರದ್ದುಗೊಂಡಿವೆ.

ಜನಸಂಖ್ಯೆ ಆಧಾರಿತವಾಗಿ ಜಿಲ್ಲಾ ಮತ್ತು ತಾಲೂಕ ಪಂಚಾಯ್ತಿ ಕ್ಷೇತ್ರಗಳನ್ನು ಹೊಸದಾಗಿ ರಚನೆ ಮಾಡಿ ಇಲಾಖೆಯೇ ಅಧಿಸೂಚನೆ ಪ್ರಕಟಿಸಿತ್ತು. ಆದರೆ ಚುನಾಯಿತ ಸದಸ್ಯರ




ಸಂಖ್ಯೆಗೆ ಅನುಗುಣವಾಗಿ ವಿಭಜಿಸಿ ಹೊಸದಾಗಿ ಕ್ಷೇತ್ರ ರಚನೆ ಮಾಡಬೇಕಿರುವದರಿಂದ ಹೊಸ ಜಿಲ್ಲಾ ಮತ್ತು ತಾಲುಕ ಪಂಚಾಯ್ತಿಗಳ ಅಧಿಸೂಚನೆ ರದ್ದುಗೊಳಿಸಿರುವದಾಗಿ ಅಧಿಸೂಚನೆಯಲ್ಲಿ ಉಲ್ಲೇಖಿಸಿದೆ. ಒಂದು ತಾಲೂಕಿನಿಂದ ಇನ್ನೊಂದು ತಾಲೂಕಿಗೆ ಗ್ರಾಮಗಳ ಸೇರ್ಪಡೆ ಹಾಗೂ ಚಿತ್ರದುರ್ಗ ಜಿಲ್ಲೆಯೂ ಸೇರಿದಂತೆ ನಾಲ್ಕು ಜಿಲ್ಲೆಗಳಲ್ಲಿ ಹಿರಿಯೂ ನಗರಸಭೆ

- ರಾಯಚೂರು ಸೇರಿ ನಾಲ್ಕು ಜಿಲ್ಲೆಗಳ ಜಿಲ್ಲಾ ಮತ್ತು ತಾಲೂಕ ಪಂಚಾಯ್ತಿ ಹೊಸ ಕ್ಷೇತ್ರಗಳ ರದ್ದು
- ಜನಸಂಖ್ಯೆ ಆಧಾರದ ಮೇಲೆ ಮರುವಿಂಗಡನೆಗೆ ಕಸರತ್ತು

ಮೇಲ್ದರ್ಜೆಗೇರಿಸಿರುವದರಿಂದ ಜಿಲ್ಲಾ ಮತ್ತು ತಾಲೂಕ ಪಂಚಾಯ್ತಿ ಕ್ಷೇತ್ರಗಳ ಸೀಮಾ ಗಡಿ ಪುನರ್ ನಡೆಸಬೇಕಿರುವದರಿಂದ ಈಗಾಗಲೇ ಘೋಷಿತ ಜಿಲ್ಲಾ ಮತ್ತು ತಾಲೂಕ ಪಂಚಾಯ್ತಿಗಳ ಕ್ಷೇತ್ರಗಳನ್ನು ರದ್ದುಗೊಳಿಸಲಾಗಿದೆ ಎಂದು ಇಲಾಖೆ ಹೇಳಿದೆ.

ಇರುಸುಮುರುಸು: 2023 ರಲ್ಲಿ ಅಧಿಸೂಚನೆಯಂತೆ ರಾಯಚೂರು ಜಿಲ್ಲೆಯಲ್ಲಿ ಚಿಕ್ಕಸೂಗೂರು ಸೇರಿದಂತೆ ಹೊಸ ಜಿಲ್ಲಾ ಪಂಚಾಯ್ತಿ ಕ್ಷೇತ್ರ ರಚಿಸಲಾಗಿತ್ತು. ಅಲ್ಲದೇ ತಾಲೂಕ ಪಂಚಾಯ್ತಿ ಕ್ಷೇತ್ರಗಳು ➘4

## ದೇವದುರ್ಗ ಅಮಾತೇಶ್ವರ ಪ್ರೌಢಶಾಲೆಗೆ ಉತ್ತಮ ಫಲಿತಾಂಶ

■ ಕನ್ನಡ ಮಾತೃ ಭೂಮಿ ವಾರ್ತೆ

**ದೇವದುರ್ಗ, ಏ.24-** ತಾಲೂಕಿನ ದೇವರಗುಡ್ಡ ಶ್ರೀ ಶರಣ ಅಮಾತೇಶ್ವರ ಪ್ರೌಢಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಲಭಿಸಿದೆ. 38 ವಿದ್ಯಾರ್ಥಿಗಳಲ್ಲಿ 36ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.ವೀರೇಶ ತಂದೆ ಮಲ್ಲಯ್ಯಸ್ವಾಮಿ((579) ಅಂಕ ಪಡೆದ ಶಾಲೆಗೆ ಟಾಪರ್ ಆಗಿದ್ದಾರೆ. ನಿಂಗಯ್ಯ ತಂದೆಕಲ್ಲಯ್ಯ ಸೂಗರಾಳ(552), ಕುಮಾರಿ ಸರೋಜ ತಂದೆ ಮೌನೇಶ ಯರಮಸಾಳ(540) ಧನರಾಜ್ ಪೂಜಾರಿ ತಂದೆ ಯಲ್ಲಪ್ಪ ಪೂಜಾರಿ(5340, ವಿಜಯಲಕ್ಷ್ಮೀ ತಂದೆ ಮಲ್ಲಿಕಾರ್ಜುನ ಯರಮಸಾಳ(531) ಪಡೆದಿದ್ದಾರೆ. ಸಮರ್ಥ ತಂದೆ ರಮೇಶ ಪವಾರ(527), ನಿವೇದಿತಾ ತಂದೆ ಮಲ್ಲಪ್ಪ ಯರಮಸಾಳ(520), ರಘುನಾಯಕ ತಂದೆ ಭೀಮನಗೌಡ(507), ಕುಮಾರಿ ನಿಖಿತಾ ತಂದೆ ಪರಸಪ್ಪ (503) ಅಂಕ ಗಳಿಸಿದ್ದಾರೆ. 9 ವಿದ್ಯಾರ್ಥಿಗಳು ಪ್ರಥಮ ಸ್ಥಾನ,20 ವಿದ್ಯಾರ್ಥಿಗಳು ದ್ವಿತೀಯ ಸ್ಥಾನ, 6ವಿದ್ಯಾರ್ಥಿಗಳು ಉತೀರ್ಣರಾಗಿದ್ದಾರೆ. ಸಾಧನೆಗೈದ ವಿದ್ಯಾರ್ಥಿಗಳನ್ನು ಶಾಲೆ ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀ ಗಿರಿಮಲ್ಲೇಶ್ವರ ಶಿವಾಚಾರ್ಯರು, ಆಡಳಿತಾಧಿಕಾರಿ ಶಂಕರಲಿಂಗಯ್ಯ, ಸಿಬ್ಬಂದಿಗಳು, ಶಿಕ್ಷಕರು ಅಭಿನಂದಿಸಿದ್ದಾರೆ. ಮಕ್ಕಳನ್ನು ಸನ್ಮಾನಿಸಿಗೌರವಿಸಲಾಯಿತು.

## ಆನ್‌ಲೈನ್ ಲೋನ್ ಕೊಡಿಸುವದಾಗಿ ವಂಚನೆ: ಮೂವರ ಬಂಧನ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.24-**ಆನ್‌ಲೈನ್ ಲೋನ್ ಕೊಡಿಸುವುದಾಗಿ ಹೇಳಿ ಜನರನ್ನು ವಂಚಿಸುತ್ತಿದ್ದ ಮೂವರು ಆರೋಪಿಗಳನ್ನು ಸೈಬರ್ ಅಪರಾಧ ಪೊಲೀಸರು ಬಂಧಿಸಿದ್ದಾರೆ.



ಮಹೇಶ, ವೀರೇಶ ಹಾಗೂ ಪ್ರಭು ಎಂಬ ಮೂರು ಜನ ಆರೋಪಿಗಳು ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜ್ ಹಿಂಭಾಗದ ಲಕ್ಷ್ಮಣ ಲೇಔಟ್‌ನಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದು, ಜನರಿಗೆ ಆನ್‌ಲೈನ್‌ನಲ್ಲಿ ಸಾಲ ಕೊಡಿಸುವುದಾಗಿ ನಂಬಿಸಿ ಅವರಿಂದ ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ಸೇರಿದಂತೆ ಇತರೆ ದಾಖಲೆಗಳನ್ನು ಪಡೆದುಕೊಂಡು ವಿವಿಧ ಕಂಪನಿಗಳ ಸಿಮ್ ಕಾರ್ಡ್‌ಗಳನ್ನು ಬಳಸಿ ಕ್ಯೂಆರ್ ಕೋಡ್‌ಗಳನ್ನು ಸೃಷ್ಟಿಸುತ್ತಿದ್ದರು.

ಬಳಿಕ ಆನ್‌ಲೈನ್ ಮೂಲಕ ವಿವಿಧ ಬ್ಯಾಂಕ್ ಖಾತೆಗಳಿಗೆ ಹಣ ಹಾಕಿಸಿಕೊಂಡು ಯಾವುದೇ ಸಾಲ ನೀಡದೇ ಮೋಸ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.ಈ ಕುರಿತು ಖಚಿತ ಮಾಹಿತಿ ಮೇರೆಗೆ ರಾಯಚೂರು ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ➘4

## ಏ.26ರಂದು ಬಂಡಾಯ ಸಾಹಿತ್ಯ ಸಂಘಟನೆಯಿಂದ ವಿಚಾರ ಗೋಷ್ಟಿ, ಕವಿಗೋಷ್ಟಿ- ಪ್ರವೀಣರೆಡ್ಡಿ ಗುಂಜಳ್ಳಿ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.24-**ಬಂಡಾಯ ಸಾಹಿತ್ಯ ಸಂಘಟನೆ ಹುಟ್ಟಿ 50 ವರ್ಷ ಪೂರ್ಣಗೊಂಡಿರುವ ಪ್ರಯುಕ್ತ ಜಿಲ್ಲಾ ಘಟಕ ಏ.26 ರಂದು ನಗರದ ಕನ್ನಡ ಭವನದಲ್ಲಿ ಬೆಳಿಗ್ಗೆ 10.30ಕ್ಕೆ ಒಂದು ದಿನ ವಿಚಾರ ಗೋಷ್ಟಿ ಮತ್ತು ಕವಿಗೋಷ್ಟಿಯನ್ನು ಆಯೋಜಿಸಿದೆ ಎಂದು ಬಂಡಾಯ ಸಾಹಿತ್ಯ ಸಂಘಟನೆ ಜಿಲ್ಲಾ ಸಂಚಾಲಕ ಪ್ರವೀಣರೆಡ್ಡಿ ಗುಂಜಳ್ಳಿ ಹೇಳಿದರು.

ಅವರಿಂದು ಮಾಧ್ಯಮಗೋಷ್ಟಿ ಉದ್ದೇಶಿಸಿ ಮಾತನಾಡಿ 1979 ರಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ವಿಚಾರಧಾರೆಯೊಂದಿಗೆ ಹುಟ್ಟು ಪಡೆದುಕೊಂಡಿದ್ದ ಬಂಡಾಯ ಸಾಹಿತ್ಯ ಸಂಘಟನೆ ಜನಪರ ಚಳುವಳಿಯ ಭಾಗಿವಾಗಿ ಕೆಲಸ ಮಾಡುತ್ತಾ ಬಂದಿದೆ. ಪ್ರಸ್ತುತ ಸಂದರ್ಬದಲ್ಲಿ ಬಂಡಾಯ ಸಾಹಿತ್ಯ ಮತ್ತು ಹೊಸ



ತಲೆಮಾರು ಅಭಿಯಾನ ನಡೆಸಲಿದೆ. ಎರಡು ಗೋಷ್ಟಿಗಳು ನಡೆಯಲಿವೆ. ಹಿರಿಯ ಬಂಡಾಯ ಸಾಹಿತಿ ಅಲ್ಲಮಪ್ರಭು ಬೆಟ್ಟದೂರು ಕಾರ್ಯಕ್ರಮ ದಿಕ್ಸೂಚಿ ಮಾತುಗಳನ್ನಾಡಲಿದ್ದಾರೆ. ಸಾಹಿತ್ಯ ಅಕಾಡೆಮಿ ಸದಸ್ಯ ಡಾ.ಸಿ.ಬಿ.ಚಿಲ್ಕರಾಗಿ ಅಧ್ಯಕ್ಷತೆವಹಿಸಲಿದ್ದಾರೆ. ಹಿರಿಯ ಸಂಶೋಧಕ ಡಾ.ಗವಿಸಿದ್ದಪ್ಪ ಪಾಟೀಲ್ ಮುಖ್ಯ ಅತಿಥಿಗಳಾಗಿ ಭಾಗಿಯಾಗಲಿದ್ದಾರೆ.

ನಂತರ ಮೊದಲ ಗೋಷ್ಟಿ ನವೋದಯ ಸಾಹಿತ್ಯ ,ಸಾಮಾಜಿಕ ಅರಿವಿನ ಸ್ವರೂಪದ ವಿಷಯದ ಕುರಿತು ಡಾ.ಟಿ.ಎಸ್.ಗೊರವರ ಮಾತನಾಡಲಿದ್ದಾರೆ. ➘4

## ಮಹಿಳಾ ಮೀಸಲಾತಿ ಕಾಯ್ದೆ ಸೋಲಿಗೆ ಬಿಜೆಪಿಯೇ ಕಾರಣ

## ಕಾಂಗ್ರೆಸ್ ಮೇಲೆ ಗೂಬೆ ಕೂರಿಸುವ ಪ್ರಯತ್ನ- ನಿರ್ಮಲಾ ಬೆಣ್ಣೆ ಆರೋಪ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.24-**ಕೇಂದ್ರ ಸರ್ಕಾರ ರಾಜಕೀಯ ದುರುದ್ದೇಶದಿಂದ ಮಹಿಳಾ ಮೀಸಲಾತಿ ಕಾಯ್ದೆಯೊಂದಿಗೆ ಕ್ಷೇತ್ರ ಪುನರ್ ವಿಂಗಡನೆ ಕಾಯ್ದೆಯನ್ನು ಸೇರಿ ಜಾರಿಗೆ ತರಲು ಹೋಗಿ ಸೋತಿದೆ. ಕಾಂಗ್ರೆಸ್ ಪಕ್ಷದ ಮೇಲೆ ಗೂಬೆ ಕೂಡಿಸುವ ಕೆಲಸ ಪ್ರಧಾನಿ ನರೇಂದ್ರ ಮೋದಿ ಮಾಡುತ್ತಿದ್ದಾರೆ ಎಂದು ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನಿರ್ಮಲಾ ಬೆಣ್ಣೆ ಹೇಳಿದರು.

ಅವರಿಂದು ಮಾಧ್ಯಮಗೋಷ್ಟಿ ಉದ್ದೇಶಿಸಿ ಮಾತನಾಡಿ, ಎಲ್ಲಾ ಪಕ್ಷಗಳ ಸಂಸದರೊಂದಿಗೆ ಚರ್ಚೆ ,ಸಮಾಲೋಚನೆ ನಡೆಸದೇ ತರಾತುರಿಯಲ್ಲಿ ಮೂರು ಕಾಯ್ದೆಗಳನ್ನು ಜಾರಿಗೆ ಮಾಡಲು ಹೋಗಿ ಬಿಜೆಪಿ ಸೋಲು ಅನುಭವಿಸಿದೆ. ಹಿಟ್ಲರ್‌ರಂತೆ ಆಡಳಿತ ನಡೆಸುತ್ತಿರುವ ಪ್ರಧಾನಿ ನರೇಂದ್ರ ಮೋದಿಯವರು ಮಹಿಳೆಯರ ಹೆಸರಿನಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಬಿಜೆಪಿ ಪಕ್ಷದಲ್ಲಿ ಮಹಿಳೆಯರಿಗೆ ಆದ್ಯತೆ ಇಲ್ಲ. ರಾಜ್ಯದಲ್ಲಿ ಶೋಭಾ ಕರ್ಲಂದಾಜೆ ಬಿಟ್ಟರೆ ಬೇರ್‍ಯಾರಿಗೂ ಅವಕಾಶವೇ ನೀಡಿಲ್ಲ. ಕಾಂಗ್ರೆಸ್ ಪಕ್ಷ ಮಹಿಳಾ ಮೀಸಲಾತಿ ವಿರೋಧಿಯಲ್ಲ. ರಾಜ್ಯದಲ್ಲಿ ಅನೇಕ ಮಹಿಳೆಯರಿಗೆ ರಾಜಕೀಯ ಅಧಿಕಾರ ನೀಡಿರುವ ಇತಿಹಾಸವಿದೆ. ಕಾಂಗ್ರೆಸ್ ಮಹಿಳಾ ವಿರೋಧಿ ಎಂದು ಬಿಜೆಪಿಯವರು ಸುಳ್ಳು ಆರೋಪ

## ಎಂಪ್ರಿ ಸಂಸ್ಥೆಯಿಂದ ಪರಿಸರ ಸಂಬಂಧಿ ವಿಷಯಗಳ ಕುರಿತು ಅಧಿಕಾರಿಗಳಿಗೆ ತರಬೇತಿ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.24-** ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ(ಎಂಪ್ರಿ) ವತಿಯಿಂದ ನಗರದ ಪರಿಸರಕ್ಕೆ ಪೂರಕವಾದ ವಿಷಯಗಳ ಕುರಿತು ಸಂಶೋಧನೆ ಹಾಗೂ ಅಧ್ಯಯಯನ ಜೊತೆಗೆ ಪರಿಸರ ಸಂಬಂಧಿ ವಿಷಯಗಳ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಹಮ್ಮಿಕೊಂಡಿದ್ದ ತರಬೇತಿ ಕಾರ್ಯಾಗಾರದಲ್ಲಿ ಸಂಸ್ಥೆಯ ಹಿರಿಯ ಸಮಾಲೋಚಕಿ ಮತ್ತು ಮುಖ್ಯಸ್ಥೆ ಡಾ.ಬಿ.ಸರಿತಾ ಅವರು ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಅನುಮೋದಿಸಿರುವ ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆ ಕ್ರಿಯಾ ಯೋಜನೆಯನ್ನು ಮುಖ್ಯವಾಹಿನಿಗೆ ತರುವ ಕುರಿತು ಮಾಹಿತಿ ನಿಡಿದರು. ಐದು ವರ್ಷಗಳ ಕಾಲ ನಿಗಧಿಪಡಿಸಲಾದ ಇಲಾಖಾ ಪ್ರಮುಖ ಕಾರ್ಯಕ್ಷಮತೆಯ ಸೂಚಕಗಳ ಮೂಲಕ ರಾಜ್ಯದಲ್ಲಿ ಕ್ರಿಯಾ ಯೋಜನೆ ಮತ್ತು ಅದರ ಅನುಷ್ಠಾನವನ್ನು ಪ್ರಸ್ತುತಪಡಿಸಿದರು. ಇದಲ್ಲದೇ ಇಲಾಖೆಗಳಿಂದ ಸೂಚಕಗಳ ಪ್ರಗತಿಯನ್ನುಮೇಲ್ವಿಚಾರಣೆ ಮಾಡಲು ಅಭಿವೃದ್ಧಿಪಡಿಸಿದ ಡ್ಯಾಶ್‌ಬೋರ್ಡ್ ಬಗ್ಗೆ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಹವಾಮಾನ ಬದಲಾವಣೆಯ ಮೇಲೆ ಹೆಚ್ಚಿನ ಪರಿಣಾಮ ಬೀರುವ ಅಲ್ಪಾವಧಿ ಹವಾಮಾನ ಮಾಲಿನ್ಯಕಾರಕಗಳು ಎಂದು ಕರೆಯಲ್ಪಡುವ ನಾನ್ ಕಾರ್ಬನ್ ಡೈಆಕ್ಸೈಡ್ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ, ಜಿಲ್ಲಾ ಮಟ್ಟದ ಅಧಿಕಾರಿಗಳಾದ ಡಾ.ಸುರೇಂದ್ರಬಾಬು, ಕೃಷ್ಣ ಶಾವಂತಗೇರಾ, ಕೆ.ಡಿ.ಬಡಿಗೇರ ಸೇರಿದಂತೆ ಅನೇಕರಿದ್ದರು.

## ವರನಟ ಡಾ.ರಾಜಕುಮಾರ ಜಯಂತಿ: ಕನ್ನಡ ನಾಡು ನುಡಿ ರಕ್ಷಣೆಗೆ ಡಾ.ರಾಜಕುಮಾರ ಕೊಡುಗೆ ಅಪಾರ-ಸುರೇಶ ವರ್ಮಾ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.24-**ವರನಟ ಡಾ.ರಾಜಕುಮಾರ್ ಅವರು ಕರ್ನಾಟಕ ಮಾತ್ರವಲ್ಲದೇ ಇಡೀ ದೇಶದ ಹೆಮ್ಮೆಯಾಗಿದ್ದರು. ಅವರ ನಿಷ್ಠೆ, ಪ್ರಾಮಾಣಿಕತೆ, ಸರಳತೆಯನ್ನು ನಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ರಾಯಚೂರು ತಹಶಿಲ್ದಾರ್ ಸುರೇಶ ವರ್ಮಾ ಅವರು ಹೇಳಿದರು.

ಅವರಿಂದು ನಗರದ ಕನ್ನಡ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ವರನಟ ಡಾ. ರಾಜಕುಮಾರ್ ಅವರ 97ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ➘4

## ತುಂಗಭದ್ರ ನೀರಾವರಿ ಕಾರ್ಮಿಕರ ಬೇಡಿಕೆಗಳಿಗೆ ಆಗ್ರಹಿಸಿ ಯರಮರಸ್ ನೀರಾವರಿ ಕಚೇರಿ ಮುಂದೆ ಪ್ರತಿಭಟನೆ




■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.24-**ತುಂಗಭದ್ರಾ ನೀರಾವರಿ ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ಬಾಕಿ ವೇತನ ಪಾವತಿ, ಕಾರ್ಮಿಕ ಕಾಯ್ದೆಗಳ ಪಾಲನೆ ಹಾಗೂ ಜಂಟಿ ಸಂಧಾನ ಸಭೆಯ ನಿರ್ಣಯಗಳನ್ನು ಜಾರಿಗೆ ತರಲು ಆಗ್ರಹಿಸಿ ಇಂದು ತುಂಗಭದ್ರಾ ಕಾಲುವೆ ವಿಭಾಗ ಕಛೇರಿ ಮುಂದೆ ತುಂಗಭದ್ರಾ ನೀರಾವರಿ ಕಾರ್ಮಿಕರ ಸಂಘ (ಎಐಸಿಸಿಟಿಯು) ವತಿಯಿಂದ ಪ್ರತಿಭಟನಾ ಹೋರಾಟದ ಮೂಲಕ ಅತೀ ಜರೂರು ಕ್ರಮಕ್ಕಾಗಿ ಯರಮರಸ್ ವಿಭಾಗದ ಕಾರ್ಯಪಾಲಕ ಅಭಿಯಂತರರಿಗೆ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನೆ ಉದ್ದೇಶಿಸಿ ತುಂಗಭದ್ರಾ ನೀರಾವರಿ ಕಾರ್ಮಿಕರ ಸಂಘದ ಕೇಂದ್ರ ಸಮಿತಿಯ ಅಧ್ಯಕ್ಷ ಕೆ.ನಾಗಲಿಂಗಸ್ವಾಮಿ ಮಾತನಾಡಿ, ಹಲವು ತಿಂಗಳುಗಳಿಂದ ಕಾರ್ಮಿಕರಿಗೆ ವೇತನ ಪಾವತಿಯಾಗದೇ ಇರುವುದರಿಂದ ಕುಟುಂಬ ನಿರ್ವಹಣೆ,

ಮಕ್ಕಳ ಶಿಕ್ಷಣ ಮತ್ತು ಆರೋಗ್ಯದ ಖರ್ಚುಗಳನ್ನು ಭರಿಸುವುದು ಕಷ್ಟಕರವಾಗಿದೆ. ಜನವರಿ, ಫೆಬ್ರುವರಿ ಮತ್ತು ಮಾರ್ಚ್, ಏಪ್ರಿಲ್ ತಿಂಗಳ ವೇತನ ಬಾಕಿ ಉಳಿದಿದ್ದು, ಕಾರ್ಮಿಕರು ಸಾಲದ ಬಾಧೆಗೆ ಒಳಗಾಗುತ್ತಿದ್ದಾರೆ ಎಂದು ಅವರು ತಿಳಿಸಿದರು. ➘4

## ಜಿಲ್ಲಾ ಗುತ್ತಿಗೆ ನೌಕರರ ಸಮಾವೇಶ:ಗುತ್ತಿಗೆ ಪದ್ದತಿ ರದ್ದುಗೊಂಡರೂ ಸಂಘಟಿತ ಹೋರಾಟ ಕೊರತೆಯಿಂದ ಶೋಷಣೆ-ಮಾನಸಯ್ಯ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.24-**ಖಾಯಂ ಕೆಲಸಕ್ಕೆ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡಿಸಿಕೊಳ್ಳುವ ಸರ್ಕಾರ ಸಮಾನ ಕೆಲಸ, ಸಮಾನ ವೇತನ ನೀಡದೇ ಏಜೆನ್ಸಿ ಮೂಲಕ ಗುತ್ತಿಗೆ ಮೂಲಕ ಪಡೆದುಕೊಂಡು ಸರಿಯಾಗಿ ವೇತನ ನೀಡದೇ ಸರ್ಕಾರ ಕಾರ್ಮಿಕರ ಕೂಲಿ ಹಣವನ್ನು ನುಂಗುತ್ತಿದ್ದಾರೆ, ನಾವೆಲ್ಲರೂ ತೊಡೆತಟ್ಟಿ ಸರ್ಕಾರವನ್ನು ಎಚ್ಚರಿಸುವ ಕೆಲಸ ಮಾಡಬೇಕು ಎಂದು ಟಿಯುಸಿಐನ ರಾಷ್ಟ್ರೀಯ ಕಾರ್ಯದರ್ಶಿ ಆರ್.ಮಾನಸಯ್ಯ ಹೇಳಿದರು.

ಅವರಿಂದು ನಗರದ ಪಂಡಿತ್ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಟಿಯುಸಿಐ ನೇತೃತ್ವದಲ್ಲಿ ಆಯೋಜಿಸಿದ್ದ ಜಿಲ್ಲಾ ಗುತ್ತಿಗೆ ಕಾರ್ಮಿಕರ ಸಮಾವೇಶದಲ್ಲಿ ಮಾತನಾಡಿದರು. ರಾಜ್ಯದ ಎಲ್ಲಾ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಹೊರಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸಿ ಇಲ್ಲದಿದ್ದರೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂಬುದು ಸಮಾವೇಶದ




ಉದ್ದೇಶವಾಗಿದೆ. ಸರ್ಕಾರ ಮಾತ್ರ ಸಮಾನ ವೇತನ ನೀಡದೇ ಏಜೆನ್ಸಿ ಮೂಲಕ ಕೂಲಿ ಮಾಡಿದವರ ಕೂಲಿ ತಿನ್ನುದ್ದಾರೆ. ಅದನ್ನು ಕೇಳುವುದು ನಮ್ಮ ಹಕ್ಕಾಗಿದೆ, ಸಂವಿಧಾನವೇ ಹೇಳಿದೆ ಪರಿಚೇದ 141 ರ ರಾಜ್ಯ ನಿರ್ದೇಶಕದಲ್ಲಿ ಸಮಾನ ಕೆಲಸಕ್ಕೆ ಸಮಾಜನ ವೇತನ, ಆದರೆ ಸಂವಿಧಾನ, ಮತ್ತು ಕಾನೂನುಗಳನ್ನು ಸರ್ಕಾರ ಉಲ್ಲಂಘನೆ ಮಾಡುತ್ತಿದೆ ಎಂದು ಆಪಾದಿಸಿದರು.

ದೇಶದಲ್ಲಿ ಅನೇಕ ರಾಜ್ಯಗಳಲ್ಲಿನ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಲು ಸುಪ್ರೀಂಕೋರ್ಟ್ ಆದೇಶ ನೀಡಿದೆ, ಅಲ್ಲಿನ ಸರ್ಕಾರಗಳು ಸಮಾನ ಕೆಲಸಕ್ಕೆ ಸಮಾನ ವೇತನ ನೀಡುತ್ತಿದೆ, ನಮ್ಮ ರಾಜ್ಯದಲ್ಲಿ ಏಕೆ ನೀಡುತ್ತಿಲ್ಲ, ನಾವು ಕೇಳುತ್ತಿಲ್ಲ, ಒಕ್ಕೊರಿಲಿನ ಕೂಗು ಸರ್ಕಾರದ ಕದ ತಟ್ಟಬೇಕಾಗಿದೆ ಎಂದರು.

ಎಲ್ಲಾ ಇಲಾಖೆಗಳಲ್ಲಿ ಹೊರಗುತ್ತಿಗೆ ಕಾರ್ಮಿಕರು ಇದ್ದಾರೆ, ಎಲ್ಲರೂ ಒಗ್ಗೂಡಿಸಿ ಒಂದೆಡೆ ಸೇರಿ ಹೋರಾಟಕ್ಕೆ ಮುನ್ನಡೆಯಬೇಕಿದೆ, ಈ ಸಮಾವೇಶಕ್ಕೆ ಸಾವಿರಾರು ಕಾರ್ಮಿಕರು ಬರಬೇಕು ಆದರೆ ಕಾರ್ಮಿಕರ ಸಂಘದಲ್ಲಿ ಕೆಲ ಚಮಚಾಗಳು ಅಡ್ಡಿಪಡಿಸಿದ್ದಾರೆ, ನೀವು ➘4

# ಚಿತ್ರದುರ್ಗದಲ್ಲಿ ಮೇ 9 ರಂದು ಯಡಿಯೂರಪ್ಪ ಅಭಿಮಾನೋತ್ಸವ: ಅಮಿತ್ ಶಾ ಉದ್ಘಾಟನೆ, 10 ಲಕ್ಷ ಜನ ಭಾಗವಹಿಸುವ ನಿರೀಕ್ಷೆ




**ಬೆಂಗಳೂರು,ಏ.24-**ಯಡಿಯೂರಪ್ಪನವರ ಅಭಿಮಾನೋತ್ಸವ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಎಪ್ರಿಲ್ 26ರಂದು ಬೆಳಗ್ಗೆ 10 ಗಂಟೆಗೆ ಭೂಮಿಪೂಜೆ ನೆರವೇರಿಸಲಾಗುವುದು ಎಂದು ಸಂಸದ ಗೋವಿಂದ ಕಾರಜೋಳ ತಿಳಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭೂಮಿಪೂಜೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸಂಸದರು, ಮಾಜಿ ಸಂಸದರು, ಶಾಸಕರು, ಮಾಜಿ ಶಾಸಕರು, ವಿಧಾನಪರಿಷತ್ ಸದಸ್ಯರು, ವಿಪಕ್ಷ ನಾಯಕರಾದ ಆರ್.ಅಶೋಕ್, ಛಲವಾದಿ ನಾರಾಯಣಸ್ವಾಮಿ ಸೇರಿ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ. ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ ಅವರು 50 ವರ್ಷಗಳ ಕಾಲ ರಾಜ್ಯವನ್ನು ಸುತ್ತಿದ್ದಾರೆ. ರೈತರ ಪರವಾಗಿ ಹೋರಾಡಿ, ದೀನದಲಿತರಿಗೆ ನ್ಯಾಯ ಒದಗಿಸಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದವರು. ಅವರ ಜೀವನ ಮತ್ತು ಸಮಾಜಸೇವೆ ಕುರಿತು ಅವರ ಅಭಿಮಾನೋತ್ಸವ ಆಚರಿಸಲು ತೀರ್ಮಾನಿಸಿದ್ದೇವೆ ಎಂದರು.

ಮೇ 9ಕ್ಕೆ ಕಾರ್ಯಕ್ರಮ: ಈ ಅಭಿಮಾನೋತ್ಸವವು ಚಿತ್ರದುರ್ಗದಲ್ಲಿ ಮೇ 9 ರಂದು ನಡೆಯಲಿದೆ. ಕೇಂದ್ರ ಗೃಹಮಂತ್ರಿ ಅಮಿತ್ ಶಾ ಅವರು ಕಾರ್ಯಕ್ರಮ ಉದ್ಘಾಟಿಸಿ, ಯಡಿಯೂರಪ್ಪ ಅವರನ್ನು ಸನ್ಮಾನಿಸಲಿದ್ದಾರೆ. ಅಭಿಮಾನೋತ್ಸವದ ಹಿಂದಿನ ದಿನ ಅಂದರೆ ಮೇ 8ರಂದು ಸಂಜೆ 6 ಗಂಟೆಗೆ ಯಡಿಯೂರಪ್ಪನವರ ಪುರಪ್ರವೇಶ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಈ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಸುಮಾರು 10 ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸುವ ನಿರೀಕ್ಷೆ ಇದೆ. ವ್ಯವಸ್ಥಿತವಾಗಿ ಕಾರ್ಯಕ್ರಮ ನಡೆಸಲು ತಂಡಗಳನ್ನು ರಚಿಸಲಾಗಿದೆ ಎಂದು ವಿವರ ನೀಡಿದರು.

ನಾಡಿನ ಎಲ್ಲಾ ಮಠಾಧೀಶರು, ಮಾಜಿ ಮುಖ್ಯಮಂತ್ರಿಗಳು, ಸಚಿವರು ಮತ್ತು ಗಣ್ಯರನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗುತ್ತಿದೆ. ಯಡಿಯೂರಪ್ಪ ಅವರನ್ನು ಬಲ್ಲ ಸಾಹಿತಿಗಳು, ಒಡನಾಡಿಗಳು, ಕಲಾವಿದರು ಸೇರಿ ಸಮಾಜದ ಎಲ್ಲ ರಂಗದವರು ಭಾಗವಹಿಸುತ್ತಾರೆ.

ಅಲ್ಲದೇ ಸಾರ್ವಜನಿಕರು, ರೈತಾಪಿ ವರ್ಗದವರು ಭಾಗವಹಿಸಲಿದ್ದಾರೆ' ಚಿತ್ರದುರ್ಗವು ಕರ್ನಾಟಕದ ಕೇಂದ್ರ ಬಿಂದು. ಆದ್ದರಿಂದ ಆ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಯಡಿಯೂರಪ್ಪ ಅವರು ಜನನಾಯಕರು. ಬಿಜೆಪಿಯನ್ನು ಕಟ್ಟಿ ಬೆಳೆಸಿದ ನಾಯಕರು ಎಂದು ಹೇಳಿದರು.

# ಬೆಸ್ಕಾಂ ಹೆಚ್‌ಟಿ ಮಿತ್ರ ಪೋರ್ಟಲ್‌ಗೆ ಇಂಧನ ಸಚಿವ ಜಾರ್ಜ್ ಚಾಲನೆ




**ಬೆಂಗಳೂರು,ಏ.24-**ಬೆಸ್ಕಾಂನ ಹೈಟೆನ್ಷನ್ ಗ್ರಾಹಕರಿಗಾಗಿ ಸಂಸ್ಥೆಯ ಇಂಜಿನಿಯರ್‌ಗಳು ಅಭಿವೃದ್ಧಿಪಡಿಸಿರುವ ಸೇವೆ ಕೋರಿಕೆ/ಕುಂದುಕೊರತೆ ಪರಿಹಾರ ಪೋರ್ಟಲ್ ಹೆಚ್‌ಟಿ ಮಿತ್ರಟಿಗೆ ಇಂಧನ ಸಚಿವ ಕೆ.ಜೆ. ಜಾರ್ಜ್ ಗುರುವಾರ ಚಾಲನೆ ನೀಡಿ ದರು.

ಬೆಸ್ಕಾಂ ಕಾರ್ಪೊರೇಟ್ ಕಚೇರಿಯಲಿ ಹೆಚ್‌ಟಿ ಮಿತ ಪೋರ್ಟಲ್‌ಗೆ ಅಧಿಕೃತ ಚಾಲನೆ ನೀಡಿ ಮಾತನಾಡಿದ ಸಚಿವರು, ಹೆಚ್‌ಟಿ ಗ್ರಾಹಕರು ವಿದ್ಯುತ್ ಸಂಬಂಧಿತ ಸೇವೆಗಳ ಕೋರಿಕೆಗೆ ಹಾಗೂ ದೂರುಗಳನ್ನು ದಾಖಲಿಸಿ ಪರಿಹಾರ ಕಂಡುಕೊಳ್ಳಲು ಈ ಪೋರ್ಟಲ್ ಪಾರದರ್ಶಕ ಮತ್ತು ಪರಿಣಾಮಕಾರಿ ವೇದಿಕೆಯಾಗಲಿದೆ. ಈ ಸೌಲಭ್ಯವು ಬೆಸ್ಕಾಂ ವ್ಯಾಪ್ತಿಯಲ್ಲಿರುವ ಹೆಚ್‌ಟಿ ಗ್ರಾಹಕರಿಗೆ ಲಭ್ಯವಾಗಲಿದ್ದು, ಇದರಿಂದ ಒ ಟ್ಟಾರೆ 18,000ಕ್ಕೂ ಹೆಚ್ಚು ಗ್ರಾಹಕರಿಗೆ ಅನುಕೂಲವಾಗಲಿದೆ ಎಂದರು.

ಈ ಮೊದಲು ಹೆಚ್‌ಟಿ ಗ್ರಾಹಕರು ದೂರು ದಾಖಲಿಸಲು 1912 ಸಹಾಯವಾಣಿ ಅವಲಂಬಿಸಬೇಕಿತ್ತು ಅಥವಾ ಖುದ್ದು ಬೆಸ್ಕಾಂ ಕಚೇರಿಗೆ ಭೇಟಿ ನೀಡಬೇಕಿತ್ತು. ಆದರೆ, ಗ್ರಾಹಕರಿಗೆ ತಮ್ಮ ದೂರಿನ ನೈಜ-ಸಮಯದ ಟ್ರ್ಯಾಕಿಂಗ್ ಸಾಧ್ಯವಾಗುತ್ತಿರಲಿಲ್ಲ. ಟಿಹೆಚ್‌ಟಿ ಮಿತ್ರಟಿ ಪೋರ್ಟಲ್ ಈ ಎಲ್ಲ ಕೊರತೆಗಳನ್ನು ನೀಗಿಸಲಿದ್ದು, ದೂರು ಪ್ರಕ್ರಿಯೆಯನ್ನು ಒಂದೇ ಡಿಜಿಟಲ್ ವೇದಿಕೆಯಡಿ ಸಂಯೋಜಿಸುತ್ತದೆ. ಗ್ರಾಹಕರು ಲಾಗಿನ್ ಆಗಿ, ದೂರು ದಾಖಲಿಸಿದ ಕೂಡಲೇ ನೈಜ ಸಮಯದಲ್ಲಿ ಅದರ ಸ್ಥಿತಿಗತಿಯನ್ನು ಪರಿಶೀಲಿಸಬಹುದು.

ಈ ಅಪ್ಲಿಕೇಶನ್‌ನಿಂದಲೇ ಗ್ರಾಹಕರ ಮೊಬೈಲ್‌ಗೆ ಎಸ್‌ಎಂಎಸ್ ಸಂದೇಶಗಳು ರವಾನೆಯಾಗಲಿದೆ ಎಂದು ಪೋರ್ಟಲ್ ವಿಶೇಷತೆಯನ್ನು ವಿವರಿಸಿದರು. ಗ್ರಾಹಕರಿಗೆ ಗುಣಮಟ್ಟದ ವಿದ್ಯುತ್ ಪೂರೈಸುವುದು ನಮ್ಮ ಸರ್ಕಾರದ ಆದ್ಯತೆ. ಸಮಸ್ಯೆಗಳು ಕಂಡುಬಂದಾಗ ತ್ವರಿತವಾಗಿ ಸ್ಪಂದಿಸಿ, ದೂರು ಪರಿಹರಿಸಲು ತಂತ್ರಜ್ಞಾನದ ಬಳಕೆ ಮಾಡಲಾಗಿದ್ದು, ಬೆಸ್ಕಾಂ ಇಂಜಿನಿಯರಿಗಳೇ ಇದನ್ನು ಸಿದ್ಧಪಡಿಸಿರುವುದು ಶ್ಲಾಘನೀಯ. ಇಂಥ ಗ್ರಾಹಕ ಸ್ನೇಹಿ ನೀತಿ ಹಾಗೂ ಕ್ರಮಗಳಿಗೆ ಸರ್ಕಾರದ ಬೆಂಬಲ ಸದಾ ಇರುತ್ತದೆ ಎಂದು ಸಚಿವರು ಹೇಳಿದರು. ಹೆಚ್ಚಿನ ಪ್ರಮಾಣದ ವಿದ್ಯುತ್ ಲೋಡ್ ಬಳಸುವ ಕೈಗಾರಿಕೆಗಳು, ಐಟಿ ಬಿಟಿ ಉದ್ಯಮ, ವಾಣಿಜ್ಯ ಸಂಕೀರ್ಣಗಳನ್ನು ನಡೆಸುವ ಗ್ರಾಹಕರಿಗೆ ತಂತ್ರಜ್ಞಾನ ಆಧಾರಿತ ಈ ಪಾರದರ್ಶಕ ವ್ಯವಸ್ಥೆಯು ಸಕಾಲಿಕವಾಗಿ ಪರಿಹಾರ ಒದಗಿಸುತ್ತದೆ. ಸುಲಲಿತ ವ್ಯವಹಾರಕ್ಕೆ ಒತ್ತು ನೀಡಿ, ತ್ವರಿತ ಪರಿಹಾರಗಳನ್ನು ಒದಗಿಸುವ ನಮ್ಮ ಬದ್ಧತೆಗೆ ಈ ಉಪಕ್ರಮ ಸಾಕ್ಷಿಯಾಗಿದೆ ಎಂದು ಇಂಧನ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿ ಗೌರವ್ ಗುಪ್ತ ತಿಳಿಸಿದ್ದಾರೆ.

ಈ ಪೋರ್ಟ್‌ಲ್‌ನಲ್ಲಿ ದೂರೂ ದಾಖಲಾದ ಕೂಡಲೇ ಮಾಹಿತಿ ದೊರೆತ ನಂತರ ಯಾರು, ಯಾವ ಕ್ರಮ ವಹಿಸಿದ್ದಾರೆ ಎಂಬ ಮಾಹಿತಿಯೂ ಅಧಿಕಾರಿಗಳಿಗೂ ನೇರವಾಗಿ ಲಭ್ಯವಾಗಲಿದೆ. ಸಂಪೂರ್ಣ ಪಾರದರ್ಶಕ ವ್ಯವಸ್ಥೆ ಇದಾಗಿರುವುದರಿಂದ ಗ್ರಾಹಕರ ಸಮಸ್ಯೆಗಳಿಗೆ ತ್ವರಿತ ಹಾಗೂ ಜವಾಬ್ದಾರಿಯುತ ಪರಿಹಾರ ದೊರೆಯಲಿದೆ ಎಂದು ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕ ಡಾ.ಎನ್. ಶಿವಶಂಕರ ತಿಳಿಸಿದ್ದಾರೆ. ಹೆಚ್‌ಟಿ ಮಿತ್ರದ ವೈಶಿಷ್ಟ್ಯಗಳು: ಹೆಚ್‌ಟಿ ಗ್ರಾಹಕರಿಗಾಗಿ ವಿಶೇಷವಾಗಿ ವಿನ್ಯಾಸಗೊಳಿಸಲಾದ ಸಮಗ್ರ ಡಿಜಿಟಲ್ ವೇದಿಕೆಯಲ್ಲಿ ಫೋನ್ ನಂಬರ್ ದಾಖಲಿಸುವ ಮೂಲಕ ಸುಲಭ ನೋಂದಣಿ ಮತ್ತು ಲಾಗಿನ್ ಸಾಧ್ಯ. ಟಿಕೆಟಿಂಗ್ ವ್ಯವಸ್ಥೆಯಿರುವ ತ್ವರಿತ ದೂರು ದಾಖಲು ಮತ್ತು ನೈಜ-ಸಮಯದ ಟ್ರ್ಯಾಕಿಂಗ್ ಅನ್ನು ಈ ವೇದಿಕೆ ಸಕ್ರಿಯಗೊಳಿಸುತ್ತದೆ. ಗ್ರಾಹಕರು ಮತ್ತು ಬೆಸ್ಕಾಂ ಅಧಿಕಾರಿಗಳ ನಡುವೆ ನೇರ ಸಂವಹನವನ್ನು ಈ ಪೋರ್ಟಲ್ ಸಾಧ್ಯವಾಗಿಸುತ್ತದೆ. ದೂರು ನಿರ್ವಹಣೆಯ ಪ್ರತಿ ಹಂತದಲ್ಲೂ ಗ್ರಾಹಕರಿಗೆ ಸ್ವಯಂಚಾಲಿತ ಸಂದೇಶಗಳನ್ನೂ ಇದು ರವಾನಿಸುತ್ತದೆ. ದೂರುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಕ್ಷೇತ್ರ ಅಧಿಕಾರಿಗಳಿಗೆ ಸೂಕ್ತ ಮಾಹಿತಿ ಒದಗಿಸುವ ಜತೆಗೆ ಟ್ರ್ಯಾಕಿಂಗ್ ಹಾಗೂ ವರದಿ ವೀಕ್ಷಣೆಗೆ ಅವಕಾಶ ಒದಗಿಸುತ್ತದೆ. ಪೋರ್ಟಲ್‌ನ ಕೇಂದ್ರೀಕೃತ ಡ್ಯಾಶ್‌ಬೋರ್ಡ್ ಮೇಲ್ವಿಚಾರಣೆ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಿಂದ ಆಗಲಿದೆ. ಅಲ್ಲದೇ, ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನಗಳ ಪಾಲನೆ ಮಾಡುವುದರಿಂದ ವಿಳಂಬವಾದಾಗ ಎಚ್ಚರಿಕೆ ಸಂದೇಶ ರವಾನೆಯಾಗಿ, ಹೊಣೆಗಾರಿಕೆಯನ್ನು ಖಾತ್ರಿಪಡಿಸುತ್ತದೆ.

# ರಾಘವ್ ಚಡ್ಡಾ ಸೇರಿ 6 ಮಂದಿ ರಾಜ್ಯಸಭಾ ಸದಸ್ಯರು ಆಮ್ ಆದ್ಮಿ ಪಕ್ಷಕ್ಕೆ ಗುಡ್‌ಬೈ

# ಬಿಜೆಪಿ ಸೇರುವುದಾಗಿ ಘೋಷಣೆ




**ನವದೆಹಲಿ,ಏ.24-**ರಾಜ್ಯಸಭೆಯಲ್ಲಿನ ಆಮ್ ಆದ್ಮಿ ಪಕ್ಷ(ಎಎಪಿ)ದ ಮೂರನೇ ಎರಡರಷ್ಟು ಸದಸ್ಯರು ಭಾರತದ ಸಂವಿಧಾನದ ನಿಬಂಧನೆಗಳನ್ನು ಬಳಸಿಕೊಂಡು ಬಿಜೆಪಿಯೊಂದಿಗೆ ವಿಲೀನಗೊಳ್ಳಲು ನಿರ್ಧರಿಸಿದ್ದೇವೆ ಎಂದು ರಾಜ್ಯಸಭಾ ಸದಸ್ಯ ರಾಘವ್ ಚಡ್ಡಾ ಘೋಷಿಸಿದರು.

ಎಎಪಿಯ ಹರ್ಭಜನ್ ಸಿಂಗ್ ಮತ್ತು ಸ್ವಾತಿ ಮಲಿವಾಲ್, ಹಿರಿಯ ಸಂಸದರಾದ ಅಶೋಕ್ ಮಿತ್ತಲ್ ಮತ್ತು ಸಂದೀಪ್ ಪಾಠಕ್ ಅವರೊಂದಿಗೆ ಬಿಜೆಪಿ ಸೇರುತ್ತಿರುವುದಾಗಿ ಅವರು ತಿಳಿಸಿದರು.

ಸಂದೀಪ್ ಪಾಠಕ್ ಮತ್ತು ಅಶೋಕ್ ಮಿತ್ತಲ್ ಅವರೊಂದಿಗೆ ಇಂದು ದೆಹಲಿಯಲ್ಲಿ ಪತ್ರಿಕಾಗೋಷ್ಠಿಉದ್ದೇಶಿಸಿ ಮಾತನಾಡಿದ ಅವರು, ನನ್ನ ಜೀವನದ 15 ವರ್ಷಗಳನ್ನು ನಾನು ಎಎಪಿಗೆ ನೀಡಿದೆ. ಈಗ ಪಕ್ಷ ಪ್ರಾಮಾಣಿಕ ರಾಜಕೀಯದಿಂದ ದೂರ ಸರಿದಿದೆ. ನಾನು ಆ ತಪ್ಪು ಪಕ್ಷದಲ್ಲಿರುವ ಸರಿಯಾದ ವ್ಯಕ್ತಿ. ನಾನು ಪಕ್ಷದಿಂದ ದೂರ ಸರಿದು ಜನರಿಗೆ ಹತ್ತಿರವಾಗುತ್ತಿದ್ದೇನೆ. ಭ್ರಷ್ಟಾಚಾರದ ವಿರುದ್ಧ ಹೋರಾಡುವ ಭರವಸೆ ನೀಡಿ ದೆಹಲಿಯಲ್ಲಿ ಒಮ್ಮೆ ಅಧಿಕಾರಕ್ಕೆ ಬಂದ ಪಕ್ಷವು ಪ್ರಾಮಾಣಿಕ ರಾಜಕೀಯದಿಂದ ದೂರ ಸರಿಯುತ್ತಿದೆ. ರಾಜ್ಯಸಭೆಯಲ್ಲಿ ಎಎಪಿಯ ಸುಮಾರು ಮೂರನೇ ಎರಡರಷ್ಟು ಸಂಸದರು ಬಿಜೆಪಿ ಸೇರಲಿದ್ದೇವೆ ಎಂದು ಹೇಳಿದರು.

ಈ ಬಗ್ಗೆ ರಾಜ್ಯಸಭಾ ಸಚಿವಾಲಯಕ್ಕೂ ಮಾಹಿತಿ ನೀಡಿದ್ದೇವೆ. ರಾಜ್ಯಸಭೆಯಲ್ಲಿ ಆಮ್ ಆದ್ಮಿ ಪಕ್ಷದ 10 ಸಂಸದರಿದ್ದಾರೆ, ಅವರಲ್ಲಿ ಮೂರನೇ ಎರಡರಷ್ಟು ಮಂದಿ ನಮ್ಮೊಂದಿಗಿದ್ದಾರೆ. ಅವರು ಸಹಿ ಮಾಡಿದ್ದಾರೆ ಮತ್ತು ಇಂದು ಬೆಳಗ್ಗೆ ನಾವು ಸಹಿ ಮಾಡಿದ ಪತ್ರ, ದಾಖಲೆಗಳನ್ನು ರಾಜ್ಯಸಭಾ ಸಭಾಪತಿಗೆ ಸಲ್ಲಿಸಿದ್ದೇವೆ. ಅವರಲ್ಲಿ ಮೂವರು ನಿಮ್ಮ ಮುಂದೆ ಇದ್ದಾರೆ. ಇದಲ್ಲದೆ ಹರ್ಭಜನ್ ಸಿಂಗ್, ರಾಜೆಂದರ್ ಗುಪ್ತಾ, ವಿಕ್ರಮ್ ಸಾಹ್ನಿ ಮತ್ತು ಸ್ವಾತಿ ಮಲಿವಾಲ್ ಮೂರನೇ ಎರಡರಷ್ಟು ಮಂದಿಯಲ್ಲಿ ಸೇರಿದ್ದಾರೆ ಎಂದರು. ನಾನು ಪಕ್ಷದ ಚಟುವಟಿಕೆಗಳಿಂದ ದೂರವಿರುವುದಕ್ಕೆ ನಿಜವಾದ ಕಾರಣವನ್ನು ನಿಮಗೆ ಹೇಳುತ್ತಿದ್ದೇನೆ. ನಾನು ಅವರ ಅಪರಾಧಗಳಲ್ಲಿ ಭಾಗವಾಗಲು ಬಯಸಲಿಲ್ಲ. ನಾನು ಅವರ ಅಪರಾಧಗಳಲ್ಲಿ ಭಾಗಿಯಾಗಿಲ್ಲದ ಕಾರಣ ಅವರ ಸ್ನೇಹಕ್ಕೆ ಅರ್ಹನಾಗಿರಲಿಲ್ಲ. ನಮಗೆ ಕೇವಲ ಎರಡು ಆಯ್ಕೆಗಳಿದ್ದವು. ಒಂದು ರಾಜಕೀಯವನ್ನು ಮತ್ತು ಕಳೆದ 15-16 ವರ್ಷಗಳಲ್ಲಿ ನಾವು ಮಾಡಿದ ಸಾರ್ವಜನಿಕ ಸೇವಾ ಕೆಲಸವನ್ನು ತ್ಯಜಿಸುವುದು. ಮತ್ತೊಂದು ಸಕಾರಾತ್ಮಕ ರಾಜಕೀಯ ಮಾಡಲು ನಮ್ಮ ಶಕ್ತಿ ಮತ್ತು ಅನುಭವವನ್ನು ಬಳಸಿಕೊಳ್ಳುವುದು. ಆದ್ದರಿಂದ, ನಾವು ಭಾರತದ ಸಂವಿಧಾನದ ನಿಬಂಧನೆಗಳನ್ನು ಬಳಸಿಕೊಂಡು ರಾಜ್ಯಸಭೆಯಲ್ಲಿ ಎಎಪಿಯ ಮೂರನೇ ಎರಡರಷ್ಟು ರಾಜ್ಯಸಭಾ ಸದಸ್ಯರು ಬಿಜೆಪಿಯೊಂದಿಗೆ ವಿಲೀನಗೊಳ್ಳಲು ನಿರ್ಧರಿಸಿದ್ದೇವೆ ಎಂದು ತಿಳಿಸಿದರು.

- **ಪ್ರಮುಖ ಘೋಷಣೆ**
  - ರಾಘವ್ ಚಡ್ಡಾ ಘೋಷಣೆ
  - ಎಎಪಿಯ 2/3 ರಾಜ್ಯಸಭಾ ಸದಸ್ಯರು ಬಿಜೆಪಿ ಸೇರ್ಪಡೆ
  - ಸಂವಿಧಾನದ ನಿಯಮಗಳ ಆಧಾರದಲ್ಲಿ ವಿಲೀನ
- **ಭಾಗಿಯಾದ ನಾಯಕರು**
  - ಹರ್ಭಜನ್ ಸಿಂಗ್
  - ಸ್ವಾತಿ ಮಲಿವಾಲ್
  - ಅಶೋಕ್ ಮಿತ್ತಲ್
  - ಸಂದೀಪ್ ಪಾಠಕ್
  - ಇತರರು: ರಾಜಿಂದರ್ ಗುಪ್ತಾ, ವಿಕ್ರಮ್ ಸಾಹ್ನಿ
- **ಕಾರಣಗಳು (ಚಡ್ಡಾ ಹೇಳಿಕೆ)**
  - 15 ವರ್ಷಗಳ ಸೇವೆ ಎಎಪಿಯಲ್ಲಿ
  - ಪಕ್ಷ ಪ್ರಾಮಾಣಿಕ ರಾಜಕೀಯದಿಂದ ದೂರವಾಗಿದೆ
  - ಭ್ರಷ್ಟಾಚಾರದ ವಿರುದ್ಧ ಹೋರಾಟ ಕುಂದಿದೆ
  - ತಪ್ಪು ಪಕ್ಷದಲ್ಲಿ ಸರಿಯಾದ ವ್ಯಕ್ತಿ ಎಂದು ಹೇಳಿಕೆ
- **ತೆಗೆದುಕೊಂಡ ನಿರ್ಧಾರ**
  - 2 ಆಯ್ಕೆಗಳು:
  - ರಾಜಕೀಯ ತ್ಯಜಿಸುವುದು
  - ಅಥವಾ ಹೊಸ ದಾರಿಯಲ್ಲಿ ಮುಂದುವರಿಯುವುದು
  - ಬಿಜೆಪಿ ಜೊತೆ ವಿಲೀನ ಆಯ್ಕೆ
- **ಸಂವಿಧಾನಾತ್ಮಕ ಪ್ರಕ್ರಿಯೆ**
  - 2/3 ಸದಸ್ಯರ ಬೆಂಬಲ ಅಗತ್ಯ
  - ಸಹಿ ಸಂಗ್ರಹಿಸಲಾಗಿದೆ
  - ರಾಜ್ಯಸಭಾ ಸಭಾಪತಿಗೆ ಪತ್ರ ಸಲ್ಲಿಕೆ
- **ಸಂಖ್ಯಾ ವಿವರ**
  - ರಾಜ್ಯಸಭೆಯಲ್ಲಿ ಎಎಪಿ ಸದಸ್ಯರು: 10
  - ವಿಲೀನಕ್ಕೆ ಬೆಂಬಲ: ಸುಮಾರು 2/3
  - ಪ್ರಮುಖ ಸದಸ್ಯರು ಈಗಾಗಲೇ ಒಪ್ಪಿಗೆ ನೀಡಿದ್ದಾರೆ
- **ಚಡ್ಡಾ ಹೇಳಿಕೆಯ ಪ್ರಮುಖ ಅಂಶಗಳು**
  - ಅಪರಾಧಗಳಲ್ಲಿ ಭಾಗಿಯಾಗಲು ಇಷ್ಟವಿಲ್ಲ
  - ಜನರಿಗೆ ಹತ್ತಿರವಾಗಲು ನಿರ್ಧಾರ
  - ಸಕಾರಾತ್ಮಕ ರಾಜಕೀಯದತ್ತ ಹೆಜ್ಜೆ
- **ರಾಜಕೀಯ ಪರಿಣಾಮ**
  - ಎಎಪಿಗೆ ದೊಡ್ಡ ಹೊಡೆತ
  - ಬಿಜೆಪಿ ಬಲವರ್ಧನೆ ಸಾಧ್ಯತೆ
  - ರಾಜ್ಯಸಭಾ ರಾಜಕೀಯದಲ್ಲಿ ಬದಲಾವಣೆ

# ಜಯಪುರ-ಕೊಪ್ಪ ರಸ್ತೆ ಮಧ್ಯೆ ಅದ್ಭುತ ಸೂರ್ಯಾಸ್ತದ ದೃಶ್ಯ-ನೋಡಿ



**ಚಿಕ್ಕಮಗಳೂರು,ಏ.24-** ಮನಸ್ಸಿಗೆ ಮುದ ನೀಡುವ ಪ್ರಕೃತಿಯ ಮಧ್ಯೆ ನಿಂತು ಸೂರ್ಯೋದಯ, ಸೂರ್ಯಾಸ್ತವನ್ನು ಕಣ್ತುಂಬಿಕೊಳ್ಳುವುದು ನಿಜಕ್ಕೂ ರೋಮಾಂಚಕ ಅನುಭವ. ಚಿಕ್ಕಮಗಳೂರು ಜಿಲ್ಲೆಯ ಜಯಪುರ ಹಾಗೂ ಕೊಪ್ಪ ರಸ್ತೆ ಮಧ್ಯೆ ಬರುವ ಗುಡ್ಡದ ತುದಿಯಲ್ಲಿ ನಿಂತು ಸೂರ್ಯೋದಯ ಹಾಗೂ ಸೂರ್ಯಾಸ್ತವನ್ನು ನೋಡುವುದು ಕಣ್ಣಿಗೆ ಹಬ್ಬದಂತೆ.

ಇಲ್ಲಿ 360 ಡಿಗ್ರಿ ಸುತ್ತಲೂ ದೃಷ್ಟಿ ಹಾಯಿದಷ್ಟೂ ದೂರ ಹಸಿರೇ ಹಸಿರು.

ಹಸಿರ ತವರ ಮಧ್ಯೆ ನಿಂತು ಸೂರ್ಯಾಸ್ತಮವನ್ನು ನೋಡುವುದಕ್ಕೆ ದೂರದ ಊರುಗಳಿಂದ ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ಆದರೆ ಸ್ಥಳದ ಬಗ್ಗೆ ಜನರಿಗೆ ಪ್ರಚಾರದ ಕೊರತೆ ಇದೆ. ಪ್ರೀ-ವೆಡ್ಡಿಂಗ್ ಶೂಟ್‌ಗಳಿಗಾಗಿ ಇಲ್ಲಿಗೆ ಹಲವರು ಬರುತ್ತಾರೆ. ಸದ್ಯ ಸ್ಥಳೀಯರೇ ಹೆಚ್ಚು ಆಗಮಿಸುತ್ತಿದ್ದು, ಸಂಜೆಯ ವೇಳೆ ಜನರು ಕುಟುಂಬಸಮೇತರಾಗಿ ಬಂದು ಇಲ್ಲಿ ಕಾಲ ಕಳೆಯುವುದು ಸಾಮಾನ್ಯವಾಗಿದೆ.

ಚಿಕ್ಕಮಗಳೂರಿನಲ್ಲಿ ನೋಡಬೇಕಿರುವ ಹಲವು ಪ್ರೇಕ್ಷಣೀಯ ಸ್ಥಳಗಳಿವೆ. ಕೊಪ್ಪದ ಬಳಿಯಿರುವ ಈ ಸೂರ್ಯಾಸ್ತದ ಜಾಗ ಅದ್ಭುತ ಅನುಭವ ನೀಡುತ್ತದೆ. ಆಗುಂಬೆಯಲ್ಲಿ ನೋಡುವ ಸೂರ್ಯಾಸ್ತಕ್ಕಿಂತಲೂ ಸುಂದರ ಜಾಗ ಇದು ಎಂದು ಸ್ಥಳೀಯ ನಿವಾಸಿ ಪ್ರಿತೇಶ್ ಅವರು ಹೇಳಿದರು.

# ಬಳ್ಳಾರಿ: ಆಸ್ಪತ್ರೆಗೆ ದಾಖಲಾಗಿದ್ದ ವಿಚಾರಣಾಧೀನ ಕೈದಿ ಪರಾರಿ; ಶೌಚಾಲಯದ ಕಿಟಕಿ ಗಾಜು ಒಡೆದು ಎಸ್ಕೇಪ್




**ಬಳ್ಳಾರಿ,ಏ.24-**ಚಿಕಿತ್ಸೆಗೆಂದು ವಿಮ್ಸ್‌ಗೆ ದಾಖಲಾಗಿದ್ದ ವಿಚಾರಣಾಧೀನ ಕೈದಿಯೊಬ್ಬ ಗುರುವಾರ ಸಂಜೆ ಸಿನಿಮೀಯ ರೀತಿಯಲ್ಲಿ ಪರಾರಿಯಾಗಿದ್ದು, ಈ ಕುರಿತು ಕೌಲ್ ಬಜಾರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪೋಕ್ಸೋ ಪ್ರಕರಣದಲ್ಲಿ ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ಬಂಧಿಯಾಗಿದ್ದ ಹರಪನಹಳ್ಳಿ ಮೂಲದ ಅಣ್ಣಪ್ಪ ಪರಾರಿಯಾದವ. ಈತ ಜೈಲಿನೊಳಗೆ ಮರದಿಂದ ಬಿದ್ದು ಗಾಯಗೊಂಡಿದ್ದ. ಈ ಹಿನ್ನೆಲೆಯಲ್ಲಿ ಚಿಕಿತ್ಸೆಗೆಂದು ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರಕ್ಕೆ ದಾಖಲಿಸಲಾಗಿತ್ತು. ಶೌಚಾಲಯದ ಕಿಟಕಿಯಿಂದ ಆರೋಪಿ ಎಸ್ಕೇಪ್: ಆರೋಪಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ, ನೆಪ ಮಾಡಿ ಶೌಚಾಲಯಕ್ಕೆ ತೆರಳಿದ್ದ. ಬಳಿಕ ಶೌಚಾಲಯದ ಕಿಟಕಿಯ ಗಾಜನ್ನು ಒಡೆದು ಅಲ್ಲಿಂದಲೇ ಪರಾರಿಯಾಗಿದ್ದಾನೆ. ಪೊಲೀಸರು ಆರೋಪಿಗಾಗಿ ಶೋಧ ಕಾರ್ಯಾಚರಣೆ ಆರಂಭಿಸಿದ್ದಾರೆ.


ಠಾಣೆಯಿಂದ ತಪ್ಪಿಸಿಕೊಂಡಿದ್ದ ಆರೋಪಿ ಪತ್ತೆ: ಎಪ್ರಿಲ್ 14 ರಂದು ಬಳ್ಳಾರಿಯಲ್ಲಿ ಪೊಲೀಸ್ ಠಾಣೆಯಿಂದ ಬಂಧಿತ ಆರೋಪಿಯೊಬ್ಬ ತಪ್ಪಿಸಿಕೊಂಡಿದ್ದ. ಪೊಲೀಸರು ತೀವ್ರ ಶೋಧ ಕಾರ್ಯಾಚರಣೆ ನಡೆಸಿ 24 ಗಂಟೆಯಲ್ಲಿ ಆರೋಪಿಯನ್ನು ಪತ್ತೆಹಚ್ಚಿದ್ದರು. ಗುತ್ತಿಗೆ ನೌಕರ ಸಂತೋಷ ಪರಾರಿಯಾಗಿದ್ದ ಆರೋಪಿ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ 16.17 ಕೋಟಿ ಹಣ ಸ್ವಂತಕ್ಕೆ ಬಳಸಿದ ಆರೋಪ ಸಂತೋಷ ಮೇಲಿದೆ. ಪರಾರಿಯಾಗಿದ್ದ

ಆರೋಪಿಯನ್ನು ಪೊಲೀಸರು 24 ಗಂಟೆಯಲ್ಲೇ ಬಂಧಿಸಿ, ಕೋರ್ಟ್ ಹಾಜರುಪಡಿಸಿದ್ದರು. ಸದ್ಯ ಆರೋಪಿ ನ್ಯಾಯಾಂಗ ಬಂಧನಲ್ಲಿದ್ದಾನೆ. ಕೆಐಡಿಬಿ ಕಚೇರಿಯ ಗುತ್ತಿಗೆ ನೌಕರನಾಗಿರುವ ಸಂತೋಷ್ ಇಲಾಖೆ ಚೆಕ್ ಗಳಿಗೆ ನಕಲಿ ಸಹಿ, ಮೊಹಲು ಬಳಸಿ 16.17 ಕೋಟಿ ದುರ್ಬಳಕೆ ಮಾಡಿಕೊಂಡಿರುವ ಆರೋಪ

ಸಂಬಂಧ ಮಾರ್ಚ್ 20 ರಂದು ಎಪಿಎಂಸಿ ಠಾಣೆಯಲ್ಲಿ ದೂರು ದಾಖಲಾಗಿತ್ತು. ಆ ಬಳಿಕ ಆತ ನಾಪತ್ತೆಯಾಗಿದ್ದ. ಪೊಲೀಸರು ತನಿಖೆ ನಡೆಸಿ, ಎಪ್ರಿಲ್ 14 ರಂದು ಆತನನ್ನು ಬಂಧಿಸಿದ್ದಾರೆ. ಬಳಿಕ ಪೊಲೀಸ್ ಠಾಣೆಯಿಂದ ಪರಾರಿಯಾಗಿದ್ದರು. ನಂತರ ಪೊಲೀಸರು 24 ಗಂಟೆಯಲ್ಲಿ ಮತ್ತೆ ಬಂಧಿಸಿದ್ದರು.

## ಪುತ್ತೂರು ಬಿಜೆಪಿ ಮುಖಂಡನ ಪುತ್ರನ ಪ್ರಕರಣ

# ಸಂತ್ರಸ್ತೆಗೆ ₹75 ಸಾವಿರ ಮಾಸಿಕ ಪರಿಹಾರ ನೀಡಲು ಹೈಕೋರ್ಟ್ ಆದೇಶ




**ಬೆಂಗಳೂರು,ಏ.24-**ಉತ್ತಮ ಭವಿಷ್ಯವಿರುವ 21 ವರ್ಷದ ವಿದ್ಯಾರ್ಥಿನಿಯನ್ನು ಮದುವೆಯಾಗುವುದಾಗಿ ನಂಬಿಸಿ ದೈಹಿಕ ಸಂಪರ್ಕ ಬೆಳೆಸಿ, ತಾಯಿಯಾಗುವಂತೆ ಮಾಡಿ, ಆಕೆಯ ಜೀವನವನ್ನು ಸಂಪೂರ್ಣವಾಗಿ ನಾಶ ಮಾಡಿದ್ದೀರಿ ಎಂದು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಬಿಜೆಪಿ ಮುಖಂಡ ಜಗನ್ನಿವಾಸ್ ರಾವ್ ಅವರ ಪುತ್ರ ಕೃಷ್ಣ ಜೆ.ರಾವ್ ವಿರುದ್ಧ ಮೌಖಿಕವಾಗಿ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, ಸಂತ್ರಸ್ತೆ ಮತ್ತು ಆಕೆಯ ಮಗುವಿನ ಪೋಷಣೆಗೆ ಮಾಸಿಕ 75 ಸಾವಿರ ರೂ.ಗಳನ್ನು ಪಾವತಿಸಬೇಕು ಎಂದು ಕಟ್ಟುನಿಟ್ಟಾಗಿ ನಿರ್ದೇಶನ ನೀಡಿದೆ.

ಇದೇ ವೇಳೆ, ಆರೋಪಿಯ ವಿರುದ್ಧದ ಪ್ರಕರಣಕ್ಕೆ ಮಧ್ಯಂತರ ತಡೆ ನೀಡಿದ್ದು, ಸಂತ್ರಸ್ತೆ ಮತ್ತವರ ಕುಟುಂಬಸ್ಥರು, ಬಂಧುಗಳು ಈ ವಿಚಾರಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳ ಮುಂದೆ ಹೋಗಬಾರದೆಂದು ನಿರ್ಬಂಧ ವಿಧಿಸಿದೆ.

ತಮ್ಮ ವಿರುದ್ಧ ದಾಖಲಾಗಿರುವ ಪ್ರಕರಣ ರದ್ದು ಕೋರಿ ಆರೋಪಿ ಕೃಷ್ಣ ಜೆ.ರಾವ್ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ, ಈ ಸೂಚನೆ ನೀಡಿ ವಿಚಾರಣೆ ಮುಂದೂಡಿದೆ.

ಅರ್ಜಿದಾರ ಆರೋಪಿ ಸ್ವತಃ ಅಥವಾ ತನ್ನ ಪೋಷಕರ ಮೂಲಕ ಸಂತ್ರಸ್ತೆ ಹಾಗೂ ಮಗುವಿನ ಅಗತ್ಯತೆಗಳನ್ನು ಪೂರೈಸಲು ಪ್ರತಿ ತಿಂಗಳು 75 ಸಾವಿರ ರೂ. ಪಾವತಿಸಬೇಕು. ಮುಂದಿನ ಒಂದು ವಾರದೊಳಗೆ ಈ ಹಣ ಪಾವತಿಸಿ, ಅದರ ಬಳಿಕ ಪ್ರತಿ ತಿಂಗಳೂ ಹಣ

# ಅಂಥ ಕೆಟಗರಿ ಜನಗಳ ಅವಶ್ಯಕತೆ ನಮಗಿಲ್ಲ: ಜಮೀರ್ ಜೆಡಿಎಸ್ ಸೇರ್ಪಡೆ ವದಂತಿಗೆ ಕುಮಾರಸ್ವಾಮಿ ಗರಂ

**ಹಾಸನ,ಏ.24-**ಅಂಥ ಕೆಟಗರಿ ಜನಗಳ ಅವಶ್ಯಕತೆ ನಮಗಿಲ್ಲ ಎಂದು ಹೇಳುವ ಮೂಲಕ ಸಚಿವ ಜಮೀರ್ ಅಹಮದ್ ಖಾನ್ ಜೆಡಿಎಸ್ ಸೇರ್ಪಡೆ ವಿಚಾರದ ಕುರಿತು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ಉದ್ದೂರು ಹೊಸಳ್ಳಿ ಗ್ರಾಮದಲ್ಲಿ ಗುರುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಜಮೀರ್ ವಿಚಾರದ ಬಗ್ಗೆ ಪ್ರಶ್ನೆ ಕೇಳುತ್ತಿದ್ದಂತೆಯೇ ಗರಂ ಆದರು. ಯಾವುದೇ ಕಾರಣಕ್ಕೂ ಆ ವಿಷಯ ನನ್ನ ಹತ್ತಿರ ರೈಜ್ ಮಾಡಬೇಡಿ ಎಂದು ಖಡಕ್ ಎಚ್ಚರಿಕೆ ನೀಡಿದರು. ಜಮೀರ್ ಅಹಮದ್ ಮರಳಿ ಜೆಡಿಎಸ್ ಸೇರ್ಪಡೆಯಾಗಲಿದ್ದಾರೆ ಎಂಬ ವದಂತಿಗಳ ಕುರಿತು ಕೇಂದ್ರ ಸಚಿವ ಹಾಗೂ ಜೆಡಿಎಸ್ ವರಿಷ್ಠ ಹೆಚ್.ಡಿ. ಕುಮಾರಸ್ವಾಮಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಅದ್ಯಾವುದನ್ನೂ ಸೀರಿಯಸ್ ಆಗಿ ತೆಗೆದುಕೊಳ್ಳಬೇಡಿ. ನಮ್ಮ ಪಕ್ಷದಲ್ಲಿ ಅಧಿಕಾರಕ್ಕೋಸ್ಕರವಾಗಿ ಅಂತಹ ಕೆಟಗರಿ ಜನಗಳನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆಯೇ ಇಲ್ಲ. ನಮಗೆ ಆ ಬಗ್ಗೆ ಈಗಾಗಲೇ ಎಲ್ಲಾ ಅನುಭವಗಳಾಗಿವೆ. ಅದರ ಅವಶ್ಯಕತೆನೂ ಇಲ್ಲ. ಸಾಕಷ್ಟು ಅನುಭವಿಸಿದ್ದೇನೆ ಎಂದು ತಮ್ಮ ಹಳೆಯ ಕಹಿನೆನಪುಗಳನ್ನು ಹೊರಹಾಕಿದರು. ಯಾವುದೇ ಕಾರಣಕ್ಕೂ ರಾಜಕೀಯದಲ್ಲಿ ಏನೋ ಶಕ್ತಿ ಬರುತ್ತೆ ಅಂತ ಹೇಳಿ, ಬೆಂದ ಮನೆಯಲ್ಲಿ ಗಳ ಹಿರಿಯುವ ಕೆಲಸಕ್ಕೆ ನಾನು ಕೈ ಹಾಕುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಇದೇ ವೇಳೆ, ಜಮೀರ್ ಅಹಮದ್ ಅವರು ಇತ್ತೀಚೆಗೆ ನೀಡಿದ್ದ ಹೇಳಿಕೆಯೊಂದನ್ನು ಪ್ರಸ್ತಾಪಿಸಿ, ಕಾಂಗ್ರೆಸ್ ಅಧಿಕಾರ ನಡೆಸುತ್ತಿರುವುದು, ಕಾಂಗ್ರೆಸ್ ನಾಯಕರು ಅನ್ನ ತಿನ್ನುತ್ತಿರುವುದು ಆ ವರ್ಗದ ಜನಗಳಿಂದಲೇ ಅಂತ ಅವರೇ ಹೇಳುತ್ತಿದ್ದಾರೆ. ಇವತ್ತು ಆ ಪರಿಸ್ಥಿತಿಯನ್ನು ರಾಜ್ಯಕ್ಕೆ ತಂದು ಇಟ್ಟಿದ್ದಾರೆ. ಪ್ರತಿನಿತ್ಯ ಅನ್ನ ತಿನ್ನುತ್ತಿರುವುದೇ ಆ ಒಂದು ವರ್ಗದಿಂದ ಅಂತ ಹೇಳುತ್ತಿದ್ದರೂ, ಇವತ್ತು ಕಾಂಗ್ರೆಸ್‌ನವರು ಯಾರಾದರೂ ಅದನ್ನು ವಿರೋಧ ಮಾಡಿದ್ದೀರಾ? ಎಂದು ಕಾಂಗ್ರೆಸ್ ನಾಯಕರನ್ನು ಪ್ರಶ್ನಿಸಿದರು. ಅವರೇ ಕಂಡಿಷನ್‌ಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಈ ಎಲ್ಲ ಬೆಳವಣಿಗೆಗಳು ಎಲ್ಲೆಲ್ಲಿಗೆ ಹೋಗುತ್ತೋ ನೋಡೋಣ ಎಂದು ಕುಮಾರಸ್ವಾಮಿ ಮಾರ್ಮಿಕವಾಗಿ ನುಡಿದರು. ಒಟ್ಟಿನಲ್ಲಿ ಜಮೀರ್ ಅಹಮದ್ ಅವರ ಜೆಡಿಎಸ್ ಮರಳುವಿಕೆಯ ವದಂತಿಗಳಿಗೆ ಎಚ್‌ಡಿಕೆ ಖಡಕ್ ಆಗಿಯೇ ಬ್ರೇಕ್ ಹಾಕಿದ್ದು, ರಾಜಕೀಯ ವಲಯದಲ್ಲಿ ಈ ಹೇಳಿಕೆ ತೀವ್ರ ಸಂಚಲನ ಮೂಡಿಸಿದೆ. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಬೆನ್ನಲ್ಲೇ ರಾಜ್ಯ ಕಾಂಗ್ರೆಸ್‌ನ ಅಲ್ಪಸಂಖ್ಯಾತ ಮುಖಂಡರಲ್ಲಿ ಭಿನ್ನಾಭಿಪ್ರಾಯ ಸ್ಫೋಟಗೊಂಡಿದೆ. ಈ ಮಧ್ಯೆ ವಿಧಾನ ಪರಿಷತ್ ಸದಸ್ಯ ಜಬ್ಬಾರ್ ಅವರನ್ನು ಪಕ್ಷದಿಂದ ಹೊರಹಾಕಲಾಗಿತ್ತು. ಜೊತೆಗೆ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಾಸೀರ್ ಅಹಮದ್ ಅವರನ್ನು ಅವರ ಸ್ಥಾನದಿಂದ ಕೈಬಿಡಲಾಗಿತ್ತು. ಆ ಬಳಿಕ ತೀವ್ರ ಚರ್ಚೆಗೆ ಗ್ರಾಸವಾಗಿದೆ.

# ಶಿವಮೊಗ್ಗ : ಜೋಕಾಲಿ ಆಡುವಾಗ ಕುಣಿಕೆ ಬಿಗಿದು 9 ವರ್ಷದ ಬಾಲಕಿ ಸಾವು

**ಶಿವಮೊಗ್ಗ,ಏ.24-**ಜೋಕಾಲಿ ಆಡುವಾಗ ಕುಣಿಕೆ ಬಿಗಿದು 9 ವರ್ಷದ ಬಾಲಕಿ ಸಾವನ್ನಪ್ಪಿರುವ ಘಟನೆ ಶಿವಮೊಗ್ಗದ ವಿದ್ಯಾನಗರದಲ್ಲಿ ಕಳೆದ ಮೂರು ದಿನಗಳ ಹಿಂದೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಪ್ರಣಮ್ಯ ಎಂಬ ಬಾಲಕಿ ಮೃತಪಟ್ಟಿದ್ದಾಳೆ. ಬೇಸಿಗೆ ರಜೆಗೆ ಲಕ್ಕಿನಕೊಪ್ಪದ ತನ್ನ ಚಿಕ್ಕಮ್ಮನ ಮನೆಗೆ ಬಂದಿದ್ದ ಬಾಲಕಿ ಬಟ್ಟೆಯಲ್ಲಿ ಕಟ್ಟಿದ ಜೋಕಾಲಿಯಲ್ಲಿ ಆಡುತ್ತಿದ್ದಾಗ, ಕುತ್ತಿಗೆಗೆ ಬಿಗಿದುಕೊಂಡಿದೆ. ಬಹಳ ಹೊತ್ತಾದರೂ ಮಾತನಾಡದೆ ಇರುವುದನ್ನು ಗಮನಿಸಿದ ಅವರ ಚಿಕ್ಕಮ್ಮ ಸ್ಥಳಕ್ಕೆ ಬಂದು ನೋಡಿದಾಗ ಬಾಲಕಿ ಮೃತಪಟ್ಟಿರುವುದು ಗೊತ್ತಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ತುಂಗಾ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಈಜಲು ಹೋದ ಅರಣ್ಯ ರಕ್ಷಕ ನೀರಿನಲ್ಲಿ ಮುಳುಗಿ ಸಾವು: ಅರಣ್ಯ ಇಲಾಖೆಯ ಕ್ಯಾಂಪ್ ಮುಂಭಾಗ ಹರಿಯುತ್ತಿದ್ದ ಕಬಿನಿ ಹಿನ್ನೀರಿನಲ್ಲಿ ಈಜಲು ಹೋಗಿದ್ದ ಅರಣ್ಯ ರಕ್ಷಕ ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಬುಧವಾರ ನಡೆದಿತ್ತು.

ಹೆಚ್.ಡಿ.ಕೋಟೆ ತಾಲೂಕಿನ ಅಂಕನಾಥಪುರ ಗ್ರಾಮದ ಸುಪ್ರೀತ್ (36) ಮೃತರು. ಎಂದಿನಂತೆ ಕರ್ತವ್ಯಕ್ಕೆ ಹಾಜರಾಗಿ ರಾತ್ರಿ ಪಾಳಿಯ ಕರ್ತವ್ಯ ಮುಗಿಸಿ ಬುಧವಾರ ಬೆಳಗ್ಗೆ ಸುಮಾರು 8 ಗಂಟೆಗೆ ಉದ್ಬೂರು ಗೇಟ್ ಬಳಿಯ ಕಳ್ಳಬೇಟೆ ತಡೆ ಶಿಬಿರದ ಸಮೀಪ ತಮ್ಮ ಇಬ್ಬರು ಸಹೋದ್ಯೋಗಿಗಳಾದ ಅಯ್ಯಪ್ಪ ಹಾಗೂ ಅಮನ್ ಎಂಬವರೊಂದಿಗೆ ಸುಪ್ರೀತ್ ಈಜಲು ಹೋಗಿದ್ದರು.

ಈಜಾಡುತ್ತಿದ್ದಾಗ ಆಯಾಸಗೊಂಡಿದ್ದ ಸುಪ್ರೀತ್ ಇಬ್ಬರು ಸಹೋದ್ಯೋಗಿಗಳಿಗೆ ತಾವು ದಡಕ್ಕೆ ಹೋಗುವುದಾಗಿ ಹೇಳಿ ನೀರಿನಿಂದ ಹೊರಬರಲು ಪ್ರಯತ್ನಿಸಿದ್ದರು. ಈ ವೇಳೆ ಆಯಾಸಗೊಂಡು ನೀರಿನಲ್ಲಿ ಮುಳುಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದರು.

ವಿದ್ಯುತ್ ತಗುಲಿ ಇಬ್ಬರು ಯುವಕರು ಸಾವು: ಹಿಟಾಚಿ ವಾಹನದಿಂದ ಮಣ್ಣು ತೆಗೆಯುವ ವೇಳೆ ಮೇಲ್ಗಡೆ ಹಾದುಹೋದ ವಿದ್ಯುತ್ ತಂತಿ ತಗುಲಿ ಇಬ್ಬರು ಯುವಕರು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಸವದತ್ತಿ ತಾಲೂಕಿನ ವಟ್ನಾಳ ಗ್ರಾಮದ ಹೊರ ವಲಯದಲ್ಲಿ ಮಂಗಳವಾರ ನಡೆದಿತ್ತು. ಜಾರ್ಖಂಡ್ ರಾಜ್ಯದ ಹಜಾರಿಬಾಗ್ ಜಿಲ್ಲೆಯ ಭರಕಟ್ಟಾ ತಿಲಯಾ ಪಚರುಕಿ ಗ್ರಾಮದ ಹಿಟಾಚಿ ಆಪರೇಟರ್ ರವಿಕುಮಾರ ಸಿಂಗ್(19) ಮತ್ತು ಹೆಲ್ಪರ್ ಸುಭಾಷಕುಮಾರ ಸಿಂಗ್(19) ಮೃತರೆಂದು ಗುರುತಿಸಲಾಗಿತ್ತು.

# ನಿವೇಶನಗಳ ಅಕ್ರಮ ಮಾರಾಟ ಯತ್ನ ಮೈಸೂರು ಪಶ್ಚಿಮ ಸಬ್ ರಿಜಿಸ್ಟರ್ ಅಮಾನತು

**ಮೈಸೂರು,ಏ.24**-ಸರ್ಕಾರದ ಸುತ್ತೋಲೆಗಳು ಹಾಗೂ ಇಲಾಖೆಯ ನಿರ್ದೇಶನಗಳನ್ನು ಉಲ್ಲಂಘಿಸಿ, ಕೋರ್ಟ್ ಡಿಕ್ರಿ ಅಥವಾ ಆದೇಶದ ಸಬ್ ಆರ್ಟಿಕಲ್ ದುರ್ಬಳಕೆ ಮಾಡಿಕೊಂಡು 24 ನಿವೇಶನಗಳ ದಾಖಲೆಗಳನ್ನು ನೋಂದಾಯಿಸಿದ ಆರೋಪದಡಿ ಮೈಸೂರು ಪಶ್ಚಿಮ ಉಪ ನೋಂದಣಿ ಕಚೇರಿಯ ಉಪ ನೋಂದಣಾಧಿಕಾರಿ (ಸಬ್ ರಿಜಿಸ್ಟರ್)ಯನ್ನು ಅಮಾನತು ಮಾಡಲಾಗಿದೆ.

ಸಬ್ ರಿಜಿಸ್ಟರ್ ಎನ್.ಶ್ರೀಕಾಂತ್ ಅವರನ್ನು ಅಮಾನತುಗೊಳಿಸಿ ಶಿಸ್ತು ಪ್ರಾಧಿಕಾರ ಹಾಗೂ ನೋಂದಣಿ ಮಹಾ ಪರಿವೀಕ್ಷಕರು ಆದೇಶ ಹೊರಡಿಸಿದ್ದಾರೆ. ಶ್ರೀಕಾಂತ್ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಮುಂದಿನ ಆದೇಶದವರೆಗೆ ಅಮಾನತಿನಲ್ಲಿಡಲಾಗಿದೆ.

ಅವರನ್ನು ಪ್ರಸ್ತುತ ಸ್ಥಳದಲ್ಲೇ ಮುಂದುವರೆಸಿದರೆ ಸಾಕ್ಷ್ಯಾಧಾರಗಳನ್ನು ನಾಶಪಡಿಸುವ ಸಾಧ್ಯತೆ ಇರುವುದರಿಂದ, ಅವರ ಲೀನ್ ಅನ್ನು ಕೇಂದ್ರ ಕಚೇರಿಗೆ ವರ್ಗಾಯಿಸಿ ಆದೇಶಿಸಲಾಗಿದೆ. ಅಮಾನತಿನ ಅವಧಿಯಲ್ಲಿ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ಕೇಂದ್ರ ಸ್ಥಾನವನ್ನು ಬಿಡುವಂತಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕಳೆದ ಡಿಸೆಂಬರ್‌ನಲ್ಲಿ ತಮ್ಮ ನಿವೇಶನವನ್ನು ಅಕ್ರಮವಾಗಿ ಅನ್ಯರಿಗೆ ನೋಂದಣಿ ಮಾಡುತ್ತಿರುವುದಾಗಿ ಮಾಜಿ ಎಂಎಲ್‌ಸಿ ಸಿದ್ಧರಾಜು ಅವರು ಮೈಸೂರಿನ ಪಶ್ಚಿಮ ಉಪ ನೋಂದಣಿ ಕಚೇರಿಗೆ ಧಾವಿಸಿ ಆಕ್ರೋಶ ವ್ಯಕ್ತಪಡಿಸಿದ್ದರು. ಇಲ್ಲಿನ ಉಪ ನೋಂದಣಾಧಿಕಾರಿ ಶ್ರೀಕಾಂತ್ ಹಾಗೂ ಅಲ್ಲಿನ ಸಿಬ್ಬಂದಿ ಶಾಮೀಲಾಗಿ ತಮಗೆ ಸೇರಿದ ಮೈಸೂರು ತಾಲೂಕು ಕೇರೆಗಳ್ಳಿ ಗ್ರಾಮ ವ್ಯಾಪ್ತಿಯ 24 ನಿವೇಶನಗಳ ದಾಖಲೆಗಳನ್ನು ಅಕ್ರಮವಾಗಿ ಸಂಪಾದಿಸಿ, ತಿದ್ದುಪಡಿ ಮಾಡಿ ಕಾನೂನುಬಾಹಿರವಾಗಿ ಅನ್ಯರ ಹೆಸರಿನಲ್ಲಿ ನೋಂದಣಿ ಮಾಡಲು ಮುಂದಾಗಿದ್ದಾರೆ.

ಈ ನಿಟ್ಟಿನಲ್ಲಿ ನೋಂದಣಿಗಾಗಿ ದಿನಾಂಕ ಪಡೆಯಲು ದಾಖಲೆಗಳನ್ನು ಅಪ್‌ಲೋಡ್ ಮಾಡಿ, ನಿವೇಶನಗಳ ಮಾಲೀಕರ ಅರಿವಿಗೆ ಬಾರದ ರೀತಿಯಲ್ಲಿ ನೋಂದಣಿ ಪ್ರಕ್ರಿಯೆ ನಡೆಸಿರುವ ಬಗ್ಗೆ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಅಲ್ಲದೆ, ಈ ಸಂಬಂಧ ಸಿದ್ಧರಾಜು ಅವರು ಸರ್ಕಾರಕ್ಕೂ ಪತ್ರ ಬರೆದು ಕ್ರಮಕ್ಕೆ ಆಗ್ರಹಿಸಿದ್ದರು.

ಈ ಹಿನ್ನೆಲೆಯಲ್ಲಿ, ಇಲಾಖಾ ತನಿಖೆ ನಡೆಸಿದಾಗ ಉಪ ನೋಂದಣಿ ಕಚೇರಿಗಳಲ್ಲಿ ದಾಖಲೆಗಳನ್ನು ನೋಂದಣಿಗೆ ಅಪ್‌ಲೋಡ್ ಮಾಡುವ ವೇಳೆ ಆರ್ಟಿಕಲ್ ಸೇಲ್ ಎಂದು ಆಯ್ಕೆ ಮಾಡಲಾಗಿದೆ.

ಸಬ್ ಆರ್ಟಿಕಲ್‌ನಲ್ಲಿ ಸಿವಿಲ್ ನ್ಯಾಯಾಲಯದ ತೀರ್ಪು ಅಥವಾ ಅಂತಿಮ ಆದೇಶದ ರವಾನೆ ಎಂದು ಆಯ್ಕೆ ಮಾಡಿ, ನೋಂದಾಯಿಸಿರುವ ಕುರಿತು ಜಿಲ್ಲಾ ನೋಂದಣಾಧಿಕಾರಿಗಳು ವರದಿ ನೀಡಿದ್ದರು.

ಶ್ರೀಕಾಂತ್ ಅವರು 24 ದಾಖಲೆಗಳನ್ನು ಕೋರ್ಟ್ ಡಿಕ್ರಿ/ಆದೇಶದ ಸಬ್ ಆರ್ಟಿಕಲ್ ಅನ್ನು ದುರ್ಬಳಕೆ ಮಾಡಿ ಇ-ಸ್ವತ್ತು ತಂತ್ರಾಂಶದಿಂದ ಮಾಹಿತಿ ಪಡೆಯದೇ ನೋಂದಾಯಿಸಿರುವುದು ಕಂಡುಬಂದಿರುವುದಾಗಿ ವರದಿಯಲ್ಲಿ ತಿಳಿಸಿದ್ದರು.

# ಬೆಂಗಳೂರು: ಚೀಲದಲ್ಲಿ ಅಪರಿಚಿತ ವ್ಯಕ್ತಿಯ ಶವ ಪತ್ತೆ ಕೊಲೆ ಮಾಡಿ ತಂದು ಎಸೆದಿರುವ ಶಂಕೆ



**ಬೆಂಗಳೂರು,ಏ.24**-ಚೀಲದಲ್ಲಿ ತುಂಬಿ ಪುರುಷನ ಶವ ಎಸೆದು ಪರಾರಿಯಾಗಿರುವ ಘಟನೆ ಬೆಂಗಳೂರಿನಲ್ಲಿ ಬೆಳಕಿಗೆ ಬಂದಿದೆ. ಗಂಗಮ್ಮನ ಗುಡಿ ಪೊಲೀಸ್ ಠಾಣಾ ವ್ಯಾಪ್ತಿಯ ಲಕ್ಷ್ಮೀಪುರದ ಬಿಡಿಎ ಲೇಔಟ್‌ನಲ್ಲಿ ಚೀಲದಲ್ಲಿ ಶವ ಪತ್ತೆಯಾಗಿದ್ದು, ಸ್ಥಳೀಯರ ಆತಂಕಕ್ಕೆ ಕಾರಣವಾಗಿದೆ.

ಬೆಳಗ್ಗೆ ವಾಕಿಂಗ್‌ಗೆ ಬಂದ ಸ್ಥಳೀಯರು ನಾಯಿಗಳು ಚೀಲ ಎಳೆಯುತ್ತಿದ್ದನ್ನು ಗಮನಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಕೂಡಲೇ ಘಟನಾ ಸ್ಥಳಕ್ಕೆ ಪೊಲೀಸರು ಧಾವಿಸಿ ಪರಿಶೀಲನೆ ನಡೆಸಿದ್ದಾರೆ. ಹತ್ಯೆಗೈದು ಶವವನ್ನು ಚೀಲಕ್ಕೆ ತುಂಬಿ ಎಸೆದಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ವಿಧಿವಿಜ್ಞಾನ ಪ್ರಯೋಗಾಲಯ ಹಾಗೂ ಸೋಕೋ (ಸೀನ್ ಆಫ್ ಕ್ರೈಂ ಆಫೀಸರ್ಸ್) ತಂಡದ ಅಧಿಕಾರಿಗಳು ಭೇಟಿ ನೀಡಿದ್ದು, ಪರಿಶೀಲನೆ ನಡೆಸಿದ್ದಾರೆ.

ನಿರ್ಜನ ಪ್ರದೇಶದಲ್ಲಿ ಶವ ಪತ್ತೆಯಾಗಿದ್ದು, ಮೃತರ ಗುರುತು ಪತ್ತೆ ಹಚ್ಚಲಾಗುತ್ತಿದೆ. ಅಕ್ಕಪಕ್ಕದ ಠಾಣೆಗಳ ವ್ಯಾಪ್ತಿಯಲ್ಲಿ ಕಾಣೆಯಾದವರ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಸೋಕೋ ತಂಡದ ಪರಿಶೀಲನೆ ಬಳಿಕ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಯುವಕ ಹತ್ಯೆ, ಐವರ ಬಂಧನ(ಪ್ರತ್ಯೇಕ ಘಟನೆ): ಮೂರು ದಿನಗಳ ಹಿಂದೆ ಪಾರಿವಾಳ ವಿಚಾರಕ್ಕೆ ಯುವಕನೊಬ್ಬನ ಹತ್ಯೆಗೈದಿದ್ದ ಪ್ರಕರಣದಲ್ಲಿ ಐವರು ಆರೋಪಿಗಳನ್ನು ರಾಜಗೋಪಾಲನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ನಂದಿನಿ ಲೇಔಟ್, ಲಗ್ಗೆರೆ ನಿವಾಸಿಗಳಾದ ದರ್ಶನ್(28), ಸುರೇಂದ್ರ(27), ಮಹೇಂದ್ರ(29), ವಿಜಯ್(26) ಹಾಗೂ ದರ್ಶನ್ (26) ಬಂಧಿತರು. ಇತರೆ ನಾಲ್ವರು ಆರೋಪಿಗಳಿಗಾಗಿ ಶೋಧ ಕಾರ್ಯ ನಡೆಯುತ್ತಿದೆ. ಏ.21 ರಂದು ರಾತ್ರಿ ರಾಜಗೋಪಾಲನಗರದ

# ಧಾರವಾಡದಲ್ಲಿ ಹೋಮ್‌ಲೇನ್ ಎಐ ಆಧಾರಿತ ಇಂಟೀರಿಯರ್ ಸ್ಟುಡಿಯೋ ಆರಂಭ

ಧಾರವಾಡ: ಭಾರತದ ಪ್ರಮುಖ ತಂತ್ರಜ್ಞಾನ ಮತ್ತು ಎಐ ಆಧಾರಿತ ಗೃಹಾಲಂಕಾರ ಬ್ರ್ಯಾಂಡ್ ಆದ ಹೋಮ್‌ಲೇನ್, ಧಾರವಾಡದ ವಸತಿ ಮಾರುಕಟ್ಟೆಗೆ ಪ್ರವೇಶಿಸುವ ಮೂಲಕ ನಗರದಲ್ಲಿ ತನ್ನ ಮೊದಲ ಸ್ಟುಡಿಯೋ ಪ್ರಾರಂಭಿಸಿದೆ. ಈ ಪ್ರಾರಂಭದೊಂದಿಗೆ, ಹೋಮ್‌ಲೇನ್ ತನ್ನ ತಂತ್ರಜ್ಞಾನ ಆಧಾರಿತ ಸಮಗ್ರ ಇಂಟೀರಿಯರ್ ಪರಿಹಾರಗಳನ್ನು ಈ ಪ್ರದೇಶಕ್ಕೆ ಪರಿಚಯಿಸಿದೆ. ಇದು ಬುದ್ಧಿವಂತ ವಿನ್ಯಾಸ, ಪಾರದರ್ಶಕ ಬೆಲೆ ಮತ್ತು ನಿಖರವಾದ ಸಮಯದ ಮಿತಿ ಒಳಗೊಂಡಿದ್ದು, ತನ್ನ ವಿಶ್ವಾಸಾರ್ಹ 45-ದಿನಗಳ ಡೆಲಿವರಿ ಗ್ಯಾರಂಟಿಯ ಬೆಂಬಲ ಹೊಂದಿದೆ.

ಧಾರವಾಡದ ಈ ಸ್ಟುಡಿಯೋ ಮಾಳಮಡ್ಡಿಯ ರೈಲ್ವೆ ಸ್ಟೇಷನ್ ರಸ್ತೆಯಲ್ಲಿದ್ದು, ಇದನ್ನು ಆಕಾಶ್ ಪಿ. ಬೇಲೂರು ಮತ್ತು ರಾಘವೇಂದ್ರ ಎಸ್. ಕಲ್ಲವಡ್ಡರ್ ನೇತೃತ್ವದ ಟಕಾಲಿಕಾ ಕನ್‌ಸ್ಟ್ರಕ್ಷನ್ ಅಂಡ್ ಇಂಟೀರಿಯರ್ಸ್‌ಟಿ ಸಹಭಾಗಿತ್ವದಲ್ಲಿ ಪ್ರಾರಂಭಿಸಲಾಗಿದೆ. ಈ ಪ್ರಾರಂಭವು ಹೋಮ್‌ಲೇನ್‌ನ ವ್ಯಾಪಕ ವಿಸ್ತರಣಾ ಕಾರ್ಯತಂತ್ರದ ಭಾಗವಾಗಿದ್ದು, ಈ ವರ್ಷ ಭಾರತದಾದ್ಯಂತ ಪ್ರಮುಖ ಮಾರುಕಟ್ಟೆಗಳಲ್ಲಿ 100 ಹೊಸ ಎಫ್‌ಓಎಫ್‌ಓ ಸ್ಟುಡಿಯೋಗಳನ್ನು ತೆರೆಯುವ ಯೋಜನೆಯನ್ನು ಇದು ಒಳಗೊಂಡಿದೆ.

1,300 ಚದರ ಅಡಿ ವಿಸ್ತೀರ್ಣದಲ್ಲಿ



ಹರಡಿರುವ ಈ ಸ್ಟುಡಿಯೋವನ್ನು ಟತನ್ಮಯಗೊಳಿಸುವ ಅನುಭವ ಕೇಂದ್ರಟವಾಗಿ ವಿನ್ಯಾಸಗೊಳಿಸಲಾಗಿದೆ. ಇಲ್ಲಿ ಗ್ರಾಹಕರು ಮಾಡ್ಯುಲರ್ ಕಿಚನ್‌ಗಳು, ವಾರ್ಡ್‌ರೋಬ್‌ಗಳು ಮತ್ತು ಸಂಪೂರ್ಣ ಮನೆಯ ವಿನ್ಯಾಸಗಳನ್ನು ಆರಿಸಿಕೊಳ್ಳಬಹುದು. ವಿನ್ಯಾಸ ಮತ್ತು ಅನುಷ್ಠಾನಕ್ಕೆ ಒಂದೇ ಸೂರಿನಡಿ ಪರಿಹಾರ ನೀಡುವ ಹೋಮ್‌ಲೇನ್, ಮನೆಮಾಲೀಕರಿಗೆ ಯೋಜನೆಯಿಂದ ವಿತರಣೆಯವರೆಗೆ ಸುಗಮವಾಗಿ ಸಾಗಲು ಸಹಾಯ ಮಾಡುತ್ತದೆ.

ಈ ಅನುಭವದ ಪ್ರಮುಖ ಅಂಶ ಸ್ಪೇಸ್‌ಕ್ರಾಫ್ಟ್ ಆಗಿದೆ. ಇದು ಹೋಮ್‌ಲೇನ್‌ನ ಸ್ವಂತ ಎಐ-ತಂತ್ರಜ್ಞಾನದ ಪ್ಲಾಟ್‌ಫಾರ್ಮ್ ಆಗಿದ್ದು, ಇದು ನೈಜ-ಸಮಯದ 3ಡಿ ದೃಶ್ಯೀಕರಣ, ವೇಗವಾದ ಬದಲಾವಣೆಗಳು ಮತ್ತು ವಿನ್ಯಾಸಗಳನ್ನು ನಿಖರವಾಗಿ ಕಾರ್ಯರೂಪಕ್ಕೆ ತರಲು ಅನುವು ಮಾಡಿಕೊಡುತ್ತದೆ.

ಗ್ರಾಹಕರು ಹೋಮ್‌ಲೇನ್‌ನ ವಿಶಿಷ್ಟ ಕೊಡುಗೆಗಳ ಪ್ರಯೋಜನವನ್ನು ಪಡೆದುಕೊಳ್ಳಬಹುದು: 45 ದಿನಗಳ ಡೆಲಿವರಿ ಗ್ಯಾರಂಟಿ. ಬಿಡಿಭಾಗಗಳು ಅಥವಾ ಸಾಮಗ್ರಿಗಳ ಮೇಲೆ 10 ವರ್ಷಗಳ ವಾರಂಟಿ ಹೋಮ್‌ಲೇನ್ ಸೀಡ್‌ನ ಸಹ-ಸಂಸ್ಥಾಪಕರು ಮತ್ತು ಸಿಓಓ ಆದ ತನುಜ್ ಚೌಧರಿ ನಮ್ಮ ಧಾರವಾಡ ಸ್ಟುಡಿಯೋದ ಪ್ರಾರಂಭವು ಉದಯೋನ್ಮುಖ ಮಾರುಕಟ್ಟೆಗಳಿಗೆ ವ್ಯವಸ್ಥಿತ ಮತ್ತು ವಿನ್ಯಾಸ-ಆಧಾರಿತ ಇಂಟೀರಿಯರ್ ಸೇವೆಗಳನ್ನು ಪರಿಚಯಿಸುವಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿದೆ ಎಂದು ಹೇಳಿದರು

ಪಾಲುದಾರಿಕೆ ಬಗ್ಗೆ ಮಾತನಾಡುತ್ತಾ, ಕಾಲಿಕಾ ಕನ್‌ಸ್ಟ್ರಕ್ಷನ್ ಅಂಡ್ ಇಂಟೀರಿಯರ್ಸ್‌ನ ಆಕಾಶ್ ಪಿ. ಬೇಲೂರು ಅವರು ಧಾರವಾಡವು ಉತ್ತಮ ವಿನ್ಯಾಸದ ಕುರಿತಾಗಿ ಮೆಚ್ಚುಗೆಯನ್ನು ಹೊಂದಿರುವ ನಗರವಾಗಿದೆ ಮತ್ತು ಇಲ್ಲಿನ ಮನೆಮಾಲೀಕರು ಹೆಚ್ಚಿನ ಗುಣಮಟ್ಟದ ಹಾಗೂ ಸುಸ್ಥಾಪಿತ ಇಂಟೀರಿಯರ್ ಪರಿಹಾರಗಳನ್ನು ಹೆಚ್ಚಾಗಿ ಹುಡುಕುತ್ತಿದ್ದಾರೆ.

ಹೋಮ್‌ಲೇನ್ ಜೊತೆಗಿನ ಪಾಲುದಾರಿಕೆಯು ನಮಗೆ ಉನ್ನತ ಮಟ್ಟದ ವಿನ್ಯಾಸ-ಆಧಾರಿತ ಇಂಟೀರಿಯರ್ ಸೇವೆಗಳನ್ನು ಪರಿಚಯಿಸಲು ಅನುವು ಮಾಡಿಕೊಡುತ್ತದೆ. ಇಲ್ಲಿ ಸೌಂದರ್ಯ ಪ್ರಜ್ಞೆ , ಕ್ರಿಯಾಶೀಲತೆ ಮತ್ತು ಗುಣಮಟ್ಟವು ಇಂದಿನ ಮನೆಮಾಲೀಕರ ನಿರೀಕ್ಷೆಗಳಿಗೆ ಅನುಗುಣವಾಗಿ ಸರಾಗವಾಗಿ ಹೊಂದಿಕೆಯಾಗುತ್ತವೆ ಎಂದರು.

## ಬೆಳಗಾವಿಯಲ್ಲಿ ಭರ್ಜರಿ ಪೊಲೀಸ್ ಕಾರ್ಯಾಚರಣೆ

# 67.93 ಲಕ್ಷ ರೂ. ಮೌಲ್ಯದ ಚಿನ್ನಬೆಳ್ಳಿ ಆಭರಣ ವಶ, ಐವರ ಬಂಧನ




■ ಕನ್ನಡ ಮಾತೃ ಭೂಮಿ ವಾರ್ತೆ

**ಬೆಳಗಾವಿ,**ಮಹತ್ವದ ಕಾರ್ಯಾಚರಣೆ ನಡೆಸಿದ ಬೆಳಗಾವಿ ಪೊಲೀಸರು, ಐವರನ್ನು ಬಂಧಿಸಿ ಅವರ ಬಳಿ ಇದ್ದ ಲಕ್ಷಾಂತರ ಮೌಲ್ಯದ ಚಿನ್ನ ಹಾಗೂ ಬೆಳ್ಳಿ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಬಂಧಿತರಿಂದ 64,47,690 ರೂ. ಮೌಲ್ಯದ 415.98 ಗ್ರಾಂ ಚಿನ್ನದ ಆಭರಣಗಳು ಹಾಗೂ ಸುಮಾರು 3,45,735 ರೂ. ಮೌಲ್ಯದ 1329.75 ಗ್ರಾಂ ತೂಕದ ಬೆಳ್ಳಿ ಆಭರಣಗಳು ಸೇರಿ ಒಟ್ಟು 67,93,425 ರೂ. ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ.ಬಂಧಿತರು ಬೆಳಗಾವಿ ವೈಭವನಗರದ ರಿಹಾನ್ ಮೈನುದ್ದೀನ್ ದಫೇದಾರ (18), ವೀರಭದ್ರನಗರ 1ನೇ ಕ್ರಾಸ್‌ನ ಮಲೀಕ್ ಖಲೀಲ್ (26), ರಾಯಬಾಗ ತಾಲೂಕು ಕುಡಚಿ ಗ್ರಾಮದ ಜುಗಾಯಿ ನಗರದ ಅರ್ಮಾನ್ ಅಕ್ಷರ ಶೇಖ್ (18) ಆಗಿದ್ದಾರೆ. ಇವರು ಕಳ್ಳತನ ಮಾಡಿದ ಆಭರಣಗಳನ್ನು ತಮ್ಮ ಬಳಿ ಇಟ್ಟುಕೊಂಡಿದ್ದ ವೀರಭದ್ರನಗರದ ಖಲೀಲ್ ಇಸ್ಮಾಯಿಲ್ (57) ಮತ್ತು ಶಾನವಾಜ ಸಿರಾಜುದ್ದೀನ್ ಪಠಾಣ್ (23) ಅವರನ್ನು ಸಹ ಪೊಲೀಸರು ಬಂಧಿಸಿದ್ದಾರೆ.

ಪೊಲೀಸ್ ಅಧಿಕಾರಿಗಳಾದ ಬಿ.ಆರ್. ಗಡ್ಡೇಕರ, ಹೊನ್ನಪ್ಪ ತಳವಾರ, ಶ್ರೀಶೈಲ ಹುಳಗೇರಿ, ಉದಯ ಪಾಟೀಲ ಹಾಗೂ ಪಿ.ಎಂ. ಮೋಹಿತೆ ಅವರ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ಸು ಕಂಡಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಹೆಚ್ಚಿನ ತನಿಖೆ ಮುಂದುವರೆಸಿದ್ದಾರೆ.

# ಬಗನಾಳ : ಉಚಿತ ಸಾಮೂಹಿಕ ಮದುವೆ ಮತ್ತು ಅಂಬೇಡ್ಕರ್ ಜಯಂತಿ



■ ಕನ್ನಡ ಮಾತೃ ಭೂಮಿ ವಾರ್ತೆ

**ಕೊಪ್ಪಳ,**ಕೊಪ್ಪಳ ತಾಲೂಕಿನ ಹಿರೇ ಬಗನಾಳ ಗ್ರಾಮದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ನೂತನ ಕಂಚಿನ ಮೂರ್ತಿ ಅನಾವರಣ ಹಾಗೂ 135ನೇ ಜಯಂತೋತ್ಸವ ಆಚರಣೆಯ ಜೊತೆಗೆ 11 ಜೋಡಿ ಸಾಮೂಹಿಕ ಮದುವೆ ಕಾರ್ಯಕ್ರಮವನ್ನು ದಿನಾಂಕ 27. ಏಪ್ರಿಲ್ 2026 ರಂದು 11:30 ಗಂಟೆಗೆ. ಕೊಪ್ಪಳ ತಾಲೂಕಿನ ಹಿರೇ ಬಗನಾಳ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ದಲಿತ ನಾಯಕ ಗಣೇಶ್ ಹೊರತಟ್ನಾಳ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಉಚಿತ ಮದುವೆ, ಡಾ. ಬಿ. ಆರ್. ಅಂಬೇಡ್ಕರ್ ಅವರ ಕಂಚಿನ ಮೂರ್ತಿ ಅನಾವರಣ ಜೊತೆಗೆ ಪ್ರೊ. ಲಿಂಗಣ್ಣ ಜಂಗಮರಳ್ಳಿ ಅವರಿಂದ ವಿಶೇಷ ಉಪನ್ಯಾಸ ಹಾಗೂ ಜಾನಪದ ಕಲಾವಿದರಾದ ಜೀವನ ಸಾಬ, ಬಿನ್ನಾಳ ಕಲಾ ತಂಡದವರಿಂದ ಜಾನಪದ ಗೀತೆ ಕಾರ್ಯಕ್ರಮ ನಡೆಯಲಿದೆ.

ಈ ಕಾರ್ಯಕ್ರಮಕ್ಕೆ ಕೊಪ್ಪಳ ಜಿಲ್ಲೆಯ ಜನ ಪ್ರತಿನಿಧಿಗಳಾದ ಕೆ. ರಾಘವೇಂದ್ರ ಹಿಟ್ನಾಳ್. ಸಂಸದ ರಾಜಶೇಖರ ಹಿಟ್ನಾಳ್. ಎಂ. ಎಲ್. ಸಿ. ಹೇಮಲತಾ ನಾಯಕ. ಜೆಡಿಎಸ್ ಮುಖಂಡ ಸಿ. ವಿ .ಚಂದ್ರಶೇಖರ. ಡಾ. ಬಸವರಾಜ್ ಕ್ಯಾವರ್ಟ. ಬಿಜೆಪಿ ಮುಖಂಡ ಗೋವಿಂದ ಕಾರಜೋಳ ಸೇರಿದಂತೆ ಅಧಿಕಾರಿಗಳು, ವಿಶೇಷ ಅತಿಥಿಗಳು, ಸಾರ್ವಜನಿಕರು ಭಾಗವಹಿಸಲಿದ್ದಾರೆ. ಎಂದು ಯುವ ಮುಖಂಡ ಮಲ್ಲಿಕಾರ್ಜುನ್ ಪೂಜಾರ ತಿಳಿಸಿದರು.

ಕಾರ್ಯಕ್ರಮದ ಪ್ರಮುಖ ಆಯೋಜಕರಾದ ರವಿ, ದೇವರಮನಿ, ಅವರು ಮಾತನಾಡಿ 5 ರಿಂದ 6. ಸಾವಿರ ಜನರು ಕಾರ್ಯಕ್ರಮಕ್ಕೆ ಭಾಗವಹಿಸುವ ನಿರೀಕ್ಷೆ ಇದೆ. ಮದುವೆಯ ವಧು ವರಗಳಿಗೆ ಬಟ್ಟೆ, ತಾಳಿ, ಕಾಲು ಉಂಗುರ ಸೇರಿದಂತೆ ಸಕಲ ವ್ಯವಸ್ಥೆಯನ್ನು ನಮ್ಮ ಸಂಘಟನೆಯನ್ನು ಮಾಡಲಾಗಿದೆ. ಸಾಮೂಹಿಕ ಮದುವೆಗಾಗಿ ಆಗಮಿಸುವ ಎಲ್ಲಾ ಬಂಧು ಭಗಿನಿ ಯರಿಗೆ ಊಟದ ವ್ಯವಸ್ಥೆಯನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಈ ಪತ್ರಿಕಾಗೋಷ್ಠಿಯಲ್ಲಿ ದಲಿತ ಮುಖಂಡರಾದ, ಗಣೇಶ್ ಹೋರತಟ್ನಾಳ, ಮಲ್ಲಿಕಾರ್ಜುನ್ ಪೂಜಾರ, ರವಿ ದೇವರಮನಿ, ಯುವರಾಜ್ ಹೊಸಮನಿ, ಫಕೀರಪ್ಪ ದೊಡ್ಡಮನಿ, ಶಿವಣ್ಣ ತಾಳ ಕನಕಪುರ, ಇತರರು ಉಪಸ್ಥಿತರಿದ್ದರು.



ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಅಥಣಿ ಮತಕ್ಷೇತ್ರದ ಕಟಗೇರಿ ಗ್ರಾಮದ ಸರಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿನಿಯಾದ ಕುಮಾರಿ ಪ್ರಾರ್ಥನಾ ನಾಗಪ್ಪ ಬಿರಾದರ ಪಾಟೀಲ ಎಸ್,ಎಸ್,ಎಲ್,ಸಿ ಪರೀಕ್ಷೆಯಲ್ಲಿ 625/625 ಅಂಕಗಳನ್ನು ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾಳೆ ಹಾಗೂ ಐಗಳಿ ಗ್ರಾಮದ ಆದರ್ಶ ಶಿಕ್ಷಣ ಸಂಸ್ಥೆಯ, ವಿದ್ಯಾರ್ಥಿಯಾದ ಕುಮಾರ ದಶರಥ ಶಿವಾಜಿ ಭೋಸಲೆ ಅವರು 624/625 ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾನೆ.ಇದು ನಮ್ಮ ಅಥಣಿ ತಾಲೂಕಿಗೆ ಹೆಮ್ಮೆಯ ಸಂಗತಿಯಾಗಿದೆ ಈ ಇಬ್ಬರು ವಿದ್ಯಾರ್ಥಿಗಳಿಗೆ ಇಂದು ಗೃಹ ಕಚೇರಿಯಲ್ಲಿ ಶಾಸಕ ಲಕ್ಷ್ಮಣ ಸವದಿ ಸನ್ಮಾನಿಸಿ ಅಭಿನಂದನೆಗಳನ್ನು ಸಲ್ಲಿಸಿದರು.

# ದಾವಣಗೆರೆ ಚುನಾವಣೆ: ಅಲ್ಪಸಂಖ್ಯಾತರ ಮೇಲಿನ ಕಾಂಗ್ರೆಸಿಗರ ರಾಜಕೀಯ ದಾಳಿ ಖಂಡನೆ

■ ಕನ್ನಡ ಮಾತೃ ಭೂಮಿ ವಾರ್ತೆ



**ಕೊಪ್ಪಳ,**ದಾವಣಗೆರೆ ದಕ್ಷಿಣ ವಿಧಾನಸಭಾ ಉಪ ಚುನಾವಣೆ ರಾಜಕಾರಣ: ಅಲ್ಪಸಂಖ್ಯಾತರ ಮೇಲಿನ ಕಾಂಗ್ರೆಸಿಗರ ರಾಜಕೀಯ ದಾಳಿ ಖಂಡಿಸುತ್ತೇವೆ ಎಂದು ಎದ್ದೇಳು ಕರ್ನಾಟಕ ಹಾಗೂ ವಿವಿಧ ಸಂಘಟನೆಗಳು ಶುಕ್ರವಾರ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿವೆ.

ಸಭೆಯಲ್ಲಿ ಮಾತನಾಡಿದ ನಾಯಕರು ಕಾಂಗ್ರೆಸ್ ಹಿಡಿದಿರುವ ಅಧಃಪತನ ಹಾದಿಯ ಪ್ರತ್ಯಕ್ಷ ದರ್ಶನಕ್ಕೆ ಹಿಡಿದ ಕನ್ನಡಿಯಾಗಿದೆ. ಆತ್ಮಾವಲೋಕನಕ್ಕೆ ಸಿದ್ಧವಿಲ್ಲದ ಕಾಂಗ್ರೆಸ್ಸಿನಿಂದ ಅಲ್ಪಸಂಖ್ಯಾತರ ಭಾವನೆಗಳ ಮೇಲೆ ರಾಜಕೀಯ ಹಲ್ಲೆ ನಡೆದಿದೆ. ಜಾತ್ಯಾತೀತ ಮೌಲ್ಯಗಳಿಗೆ ತಿಲಾಂಜಲಿಜಾತಿ ಮತ್ತು ಕುಟುಂಬ ರಾಜಕಾರಣಕ್ಕೆ ರತ್ನಗಂಬಳಿಯ ಸದಾ ಸ್ವಾಗತ.ದಾವಣಗೆರೆ ಉಪ ಚುನಾವಣೆಗೆ ಟಿಕೆಟ್ ನೀಡುವ ವಿಚಾರದಲ್ಲಿ ಕಾಂಗ್ರೆಸ್ ನಡೆದುಕೊಂಡ ರೀತಿ ಜಿಗುಪ್ಸೆ ಮೂಡಿಸಿದರೆ, ಅದು ಈಗ ತನ್ನದೇ ಪಕ್ಷದ ಅಲ್ಪಸಂಖ್ಯಾತ ಮುಖಂಡರ ಮೇಲೆ ತೆಗೆದುಕೊಳ್ಳುತ್ತಿರುವ ಸೇಡಿನ ಕ್ರಮಗಳು ಆಕ್ರೋಶ ಹುಟ್ಟಿಸುತ್ತಿವೆ. ಬಹಳ ನಿರಾಶೆ ಮೂಡಿಸಿದೆ.

ಕರ್ನಾಟಕದ ನಾಗರೀಕ ಸಮಾಜದ ಪರವಾಗಿ ಓಕಇಇ ಹಾಗೂ ಅಐಇಇ ನಡವಳಿಕೆ ಸುಧಾರಿಸಿಕೊಳ್ಳಬೇಕು. ಮಾತಿನಲ್ಲಿ ಜಾತ್ಯಾತೀತತೆ ಇದ್ದರೂ ಅದರ ನಡುವಳಿಕೆ ಕರ್ನಾಟಕ ಜಾತ್ಯಾತೀತ ಶಕ್ತಿಗಳನ್ನು ದುರ್ಬಲಗೊಳಿಸುವ ರೀತಿಯಲ್ಲಿ ಇದೆ ಎಂಬುದನ್ನು ನೇರ ಮಾತುಗಳಲ್ಲಿ ಹೇಳಲೇಬೇಕಾದ ಸಂದರ್ಭ ಎದುರಾಗಿದೆ.ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮುಸ್ಲಿಂ ಸಮುದಾಯ ಅತ್ಯಂತ ಹೆಚ್ಚಿನ ಜನಸಂಖ್ಯಾ ಬಾಹುಳ್ಯವಿದ್ದರೂ ಲಿಂಗಾಯತ ಸಮುದಾಯದ ಶಾಮನೂರು ಶಿವಶಂಕರಪ್ಪ ಅವರೇ ಕಳೆದ 30 ವರ್ಷಗಳಿಂದ ಕಾಂಗ್ರೆಸ್ ಶಾಸಕರಾಗಿ ಮುಂದುವರೆಯುತ್ತಾ ಬಂದಿದ್ದಾರೆ. ಅವರ ನಿಧನದ ನಂತರ ಈ ಕ್ಷೇತ್ರವನ್ನು ಮುಸ್ಲಿಂ ಸಮುದಾಯಕ್ಕೆ ನೀಡಲಾಗುತ್ತದೆ ಎಂಬ ಭರವಸೆಯನ್ನು ಕಾಂಗ್ರೆಸ್ ನಾಯಕತ್ವ ನೀಡಿತ್ತು, ಕೇವಲ ಮುಸ್ಲಿಂ ಮಾತ್ರವಲ್ಲ ಕುಟುಂಬ ರಾಜಕಾರಣವನ್ನು ವಿರೋಧಿಸುವ ಎಲ್ಲ ಜಾತ್ಯಾತೀತ ಶಕ್ತಿಗಳ ಬಯಕೆಯೂ ಆಗಿತ್ತು. ಆದರೆ ಕುಟುಂಬ, ಜಾತಿ ಹಾಗೂ ಹಣದ ಬಲದ ಮುಂದೆ ಕಾಂಗ್ರೆಸ್ಸಿನ ಹೈಕಮಾಂಡ್ ಹಾಗೂ ರಾಜ್ಯ ನಾಯಕತ್ವ ಮಂಡಿಯೂರಿದ ಬಗೆ ಎಲ್ಲರಿಗೂ ಜಿಗುಪ್ಸೆ ಮೂಡಿಸಿತ್ತು.

ಕಾಂಗ್ರೆಸ್ಸಿನ ಹಸಿಹಸಿ ಅವಕಾಶವಾದಿ ನಿಲುವಿನಿಂದ ಬೇಸತ್ತು ಕೇವಲ ಮುಸ್ಲಿಂ ಸಮುದಾಯದ ಮುಖಂಡರು ಮಾತ್ರವಲ್ಲ ಯಾವ ಜಾತ್ಯಾತೀತ ಶಕ್ತಿಗಳು ಸಹ ಇಲ್ಲಿನ ಚುನಾವಣಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲಿಲ್ಲ. ಎದ್ದೇಳು ಕರ್ನಾಟಕದ ವಿಚಾರಕ್ಕೆ ಬರುವುದಾದರೆ 2023 ರ ಚುನಾವಣೆಯಲ್ಲಿ ಕರ್ನಾಟಕದ ನಾಗರೀಕ ಸಂಘಟನೆಗಳ ಸಂಯುಕ್ತ ಶಕ್ತಿಯಾಗಿ ಎದ್ದೇಳು ಕರ್ನಾಟಕ ತನ್ನನ್ನು ಸಂಪೂರ್ಣವಾಗಿ ಸುರಿದುಕೊಂಡು ಕೆಲಸ ಮಾಡಿ ಸಂವಿಧಾನ ವಿರೋಧಿ ಬಿಜೆಪಿಯನ್ನು ಸೋಲಿಸುವುದರಲ್ಲಿ ಮಹತ್ವದ ಪಾತ್ರ ನಿರ್ವಹಿಸಿತ್ತು. 2025ರಲ್ಲಿ ನಡೆದ ಉಪ ಚುನಾವಣೆಗಳಲ್ಲೂ ಶಿಗ್ಗಾಂವಿ ಹಾಗೂ ಸಂಡೂರು ಕ್ಷೇತ್ರದಲ್ಲಿ ತನ್ನದೇ ರೀತಿಯಲ್ಲಿ ಸಕಾರಾತ್ಮಕ ಕೊಡುಗೆ ನೀಡಿತ್ತು. ಆದರೆ ಕಾಂಗ್ರೆಸ್ ನಡೆದುಕೊಂಡ ರೀತಿಯಿಂದಾಗಿ ನಾವು ಈ ಬಾರಿಯ ಉಪ ಚುನಾವಣೆಯಲ್ಲಿ ಮಧ್ಯ ಪ್ರವೇಶಿಸದೇ ಇರಲು ತೀರ್ಮಾನಿಸಿದೆವು. ಇದು ಎದ್ದೇಳು ಕರ್ನಾಟಕದ ಕತೆ ಮಾತ್ರವಲ್ಲ ಬಹುಪಾಲು ಜನಪರ ಸಂಘಟನೆಗಳ ನಿಲುವು ಸಹ ಇದೇ ಆಗಿತ್ತು.ದಾವಣಗೆರೆಯ ಜಾತ್ಯಾತೀತ ಶಕ್ತಿಗಳ ಮುಂದೆ ಹಾಗೂ ಅಲ್ಪಸಂಖ್ಯಾತ ಸಮುದಾಯದ ಮುಂದೆ ದೊಡ್ಡ ಇಕ್ಕಟ್ಟು ಸೃಷ್ಟಿಯಾಗಿತ್ತು.

ಕಾಂಗ್ರೆಸ್ಸಿನ ನಿಲುವನ್ನಂತೂ ಯಾರೂ ಒಪ್ಪುವ ಮಾತೇ ಇರಲಿಲ್ಲ. ಆದರೆ ಕೆಲವರು ಕಾಂಗ್ರೆಸ್ಸನ್ನು ಬೈದುಕೊಂಡು ಕಾಂಗ್ರೆಸ್ಸಿಗೇ ಮತ ಹಾಕಿದರು. ಕೆಲವರು ಕೋಮುವಾದಿಗಳನ್ನು ಮುಂದೆ ನೋಡಿಕೊಳ್ಳೋಣ, ಈ ಬಾರಿ ಕಾಂಗ್ರೆಸ್ಸಿಗೆ ಪಾಠ ಕಲಿಸಲೇಬೇಕು ಎಂದು ಇತರೆ ಅಭ್ಯಾರ್ಥಿಗಳಿಗೆ ಓಟು ಹಾಕಿದರು. ಕೆಲವರು ಓಟು ಮಾಡಲಿಕ್ಕೇ ಹೋಗಲಿಲ್ಲ. ಫಲಿತಾಂಶ ಏನೇ ಬರಬಹುದು, ಅಲ್ಪ ಅಂತರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಹಣ ಬಲದ ಮೇಲೆ ಗೆದ್ದರೂ ಗೆಲ್ಲಬಹುದು, ಆದರೆ ಕಾಂಗ್ರೆಸ್ ನೈತಿಕವಾಗಿ ಸೋತಾಗಿದೆ.ಕಾಂಗ್ರೆಸ್ಸಿನ ಈ ನೈತಿಕ ಸೋಲಿನ ಹೊಣೆ ಹೊರಬೇಕಾಗಿರುವುದು ಯಾರು ? ನಿಸ್ಸಂಶಯವಾಗಿ ಕಾಂಗ್ರೆಸ್ಸಿನ ಹೈಕಮಾಂಡ್, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು. ಕಾಂಗ್ರೆಸ್ಸಿನ ಈ ಸ್ಥಿತಿಗೆ ಕಾರಣವಾಗಿರುವ ಈ ನಾಯಕರು ಆತ್ಮಾವಲೋಕನ ಮಾಡಿಕೊಳ್ಳುವ ಬದಲು ನೊಂದಿದ್ದ ದಾವಣಗೆರೆಯ ಅಲ್ಪಸಂಖ್ಯಾತ ಸಮುದಾಯದ ಭಾವನೆಗಳಿಗೆ ಸ್ಪಂದಿಸಿದ ಅಲ್ಪಸಂಖ್ಯಾತ ಸಮುದಾಯದ ಆದರೆ ಜಾತ್ಯಾತೀತ ನಿಲುವಿಗೆ ಮತ್ತು ಕಾಂಗ್ರೆಸ್ಸಿಗೆ ಬದ್ಧವಾಗಿದ್ದ ನಾಯಕರ ತಲೆದಂಡಕ್ಕೆ ಹೊರಟಿರುವುದು ಅಕ್ಷಮ್ಯ ಅಪರಾಧ. ಇದನ್ನು ಎದ್ದೇಳು ಕರ್ನಾಟಕ ತೀವ್ರ ರೀತಿಯಲ್ಲಿ ಖಂಡಿಸುತ್ತದೆ.ದಾವಣಗೆರೆಯ ಈ ಬಲಾಢ್ಯ ಕುಟುಂಬದವರು ಜಾತಿ ಕಾರಣಕ್ಕೆ ಬಿಜೆಪಿಯ ರಾಘವೇಂದ್ರ ಅವರನ್ನು ಗೆಲ್ಲಿಸಿ ಎಂದು ಬಹಿರಂಗವಾಗಿ ಕರೆ ಕೊಟ್ಟಾಗಲೂ ಯಾವುದೇ ಕ್ರಮ ತೆಗೆದುಕೊಳ್ಳದೆ ತೆಪ್ಪಗಿದ್ದ ಕಾಂಗ್ರೆಸ್ ಮುಖಂಡರು ಈಗ ಇಲ್ಲದ ಕಾರಣ ಹುಡುಕಿ ಅಲ್ಪಸಂಖ್ಯಾತ ಮುಖಂಡರನ್ನು ದಮನಿಸಲು, ಅಲ್ಪಸಂಖ್ಯಾತ ಮುಖಂಡರ ನಡುವೆ ಒಡಕು ತರಲು ಪ್ರಯತ್ನಿಸುತ್ತಿರುವುದು ನಾಚಿಕೆಗೇಡಿನ ವಿಚಾರವಾಗಿದೆ.

ಕಾಂಗ್ರೆಸ್ ಇದೇ ಧೋರಣೆಯನ್ನು ಮುಂದುವರಿಸಿದರೆ ಮುಂದಿನ ಚುನಾವಣೆಯಲ್ಲಿ ಎದ್ದೇಳು ಕರ್ನಾಟಕವನ್ನೂ ಒಳಗೊಂಡಂತೆ ಎಲ್ಲಾ ಜನಪರ ಶಕ್ತಿಗಳ ಬೆಂಬಲ ಕಳೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಬಯಸುತ್ತೇವೆ.ದಾವಣಗೆರೆ ವಿದ್ಯಮಾನ ಬರಲಿರುವ 2028 ರ ಚುನಾವಣೆಗೆ ಮುನ್ನದ ಎಚ್ಚರಿಕೆ ಗಂಟೆಯಾಗಿದೆ. ಅಲ್ಪಸಂಖ್ಯಾತರನ್ನು, ದಲಿತರನ್ನು, ಜಾತ್ಯಾತೀತ ಜನತೆಯನ್ನು, ಪ್ರಗತಿಪರ ಶಕ್ತಿಯನ್ನು ಟೇಕನ್ ಫಾರ್ ಗ್ರ್ಯಾಂಟೆಡ್ ಮಾಡಿಕೊಳ್ಳಬೇಡಿ ಎಂದು ದಾವಣಗೆರೆ ಹೇಳುತ್ತಿದೆ. ಕಾಂಗ್ರೆಸ್ ನಾಯಕತ್ವ ಈಗಾದರೂ ತನ್ನ ತಪ್ಪನ್ನು ನೋಡಿಕೊಂಡು ಆಗಿರುವ ಅನಾಹುತವನ್ನು ಸರಿಪಡಿಸುವ ದಿಕ್ಕಿನಲ್ಲಿ ಹೆಜ್ಜೆ ಇಡಬೇಕು.

ಇದು ಕಾಂಗ್ರೆಸಿನ ಮುಸ್ಲಿಮ್ ವಿರೋಧಿ ಧೋರಣೆಗಳನ್ನು ಕೊಪ್ಪಳದ ಪ್ರಗತಿಪರ ಸಂಘಟನೆಗಳು ಖಂಡಿಸುತ್ತವೆ.ಮುಂಬರುವ ದಿನಗಳಲ್ಲಾದರೂ ಕಾಂಗ್ರೆಸ್ ತನ್ನ ನಿಲುವುಗಳನ್ನು ಬದಲಾಯಿಸಿಕೊಂಡು ಪ್ರಗತಿಯತ್ತ ಆಲೋಚಿಸುವುದು ಒಳಿತು. ಕಾಂಗ್ರೆಸಿನ ಮುಸ್ಲಿಮ್ ವಿರೋಧಿ ಧೋರಣೆಯು ಕೇವಲ ದಾವಣಗೆರೆಗೆ ಅಷ್ಟೇ ಸೀಮಿತವಾಗಿ ಉಳಿದಿಲ್ಲ. ಕೊಪ್ಪಳವು ಸೇರಿದಂತೆ ಎಲ್ಲಾ ಜಿಲ್ಲೆಗಳಲ್ಲೂ ಇದೇ ವಾತಾವರಣ ಇದೆ ಅನ್ನುವುದನ್ನು ಕಾಂಗ್ರೆಸ್ ಹೈಕಮಾಂಡ್ ಬೇಗ ಅರಿತಷ್ಟು ಒಳ್ಳೆಯದು ಎಂದು ಎದ್ದೇಳು ಕರ್ನಾಟಕ ಹಾಗೂ ಕೊಪ್ಪಳದ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸಂಚಾಲಕ ಬಸವರಾಜ್ ಶೀಲವಂತ್ರ. ಕರ್ನಾಟಕ ಮುಸ್ಲಿಮ್ ಜಮಾಅತ್ ಮಾಜಿ ಜಿಲ್ಲಾ ಸಂಚಾಲಕ ಮೌಲಾನಾ ಮೊಹಮ್ಮದ್ ಅಬುಲ್ ಹಸನ್ ಖಾಝಿ.ಜನಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಸ್.ಎ. ಗಫಾರ್. ಪಾಸ್ಟರ್ಸ್ ಅಸೋಸಿಯೇಷನ್ ಜಿಲ್ಲಾ ಅಧ್ಯಕ್ಷ ಚನ್ನಬಸಪ್ಪ ಅಪ್ಪಣರ್ವ. ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾದ ಜಿಲ್ಲಾ ಅಧ್ಯಕ್ಷ ಆದಿಲ್ ಪಟೇಲ್.ಭಾರತೀಯ ಕಾರ್ಮಿಕ ಸಂಘಟನೆಗಳ ಒಕ್ಕೂಟದ ಸಂಚಾಲಕ ತುಕಾರಾಮ್ ಪಾತ್ರೋಟಿ.ದಲಿತ ಸಂಘಟನೆಯ ಮುಖಂಡ ಗವಿಸಿದ್ದಪ್ಪ ಹಲಗಿ ಕುಣಿಕೇರಿ. ಪೇಂಟರ್ ಕಾರ್ಮಿಕರ ಸಂಘದ ಅಧ್ಯಕ್ಷ ರಜಾಕ್ ಪೇಂಟರ್. ಖಜಾಂಚಿ ಆಸಿಫ್ ಕಿಲ್ಲೆದಾರ್.ಇಂತ್ಯಾಝು ಎಮ್. ಪಲ್ಟನ್.ಕೊಳಚೆ ನಿರ್ಮೂಲನಾ ವೇದಿಕೆ ಜಿಲ್ಲಾ ಸಂಚಾಲಕ ಮಖಬೂಲ್ ರಾಯಚೂರು.ಶಿವಪ್ಪ ಹಡಪದ್.ಭಾಗ್ಯನಗರದ ಕಟ್ಟಡ ಕಾರ್ಮಿಕರ ಸಂಘದ ಮಾಜಿ ಅಧ್ಯಕ್ಷ ದೇವಪ್ಪ ಎಸ್.ಕಟ್ಟಿಮನಿ ಮುಂತಾದವರು ಸಭೆಯಲ್ಲಿ ಉಪಸ್ಥಿತರಿದ್ದರು.

# ...ಮೊದಲನೇ ಪುಟದಿಂದ

## ಎಗೆ 5.25%, ಬಿಗೆ 5.25%, ಸಿಗೆ 4.50% ನೀಡಲು ಸಂಪುಟ ಸಭೆ ತೀರ್ಮಾನ

ಎಸ್ ಟಿ (7%)ರಂತೆ 24% ಮೀಸಲಾತಿ ಹಿನ್ನೆಲೆಯಲ್ಲಿ ಒಟ್ಟು ಮೀಸಲಾತಿ 56% ಗೆ ಹೋಯಿತು. ಹೈಕೋರ್ಟ್ ಒಟ್ಟು ಮೀಸಲಾತಿ ಪ್ರಮಾಣ 50% ಮೀರಬಾರದು ಎಂದು ಹೇಳಿತು. ಮಾ.27ರಂದು ವಿಶೇಷ ಸಂಪುಟ ಸಭೆ ಮಾಡಲು ತೀರ್ಮಾನಿಸಲಾಗಿತ್ತು. ಆದರೆ, ನೀತಿ ಸಂಹಿತೆ ಇದ್ದ ಕಾರಣ ಸಭೆ ಸಾಧ್ಯವಾಗಿರಲಿಲ್ಲ ಎಂದರು. ಕಳೆದ ಸಂಪುಟ ಸಭೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ತಾಂತ್ರಿಕ ಸಮಿತಿ ರಚಿಸಲು ತೀರ್ಮಾನಿಸಲಾಗಿತ್ತು. ಅವರು ಇಂದು ವಿಶೇಷ ಸಚಿವ ಸಂಪುಟ ಸಭೆಯಲ್ಲಿ ವರದಿ ನೀಡಿದರು. ಒಳಮೀಸಲಾತಿ ಕಾಯ್ದೆಯ ಪ್ರಕಾರ 6:6:5ರಂತೆ ಒಳಮೀಸಲಾತಿ ನೀಡಲಾಗಿತ್ತು. ಈಗ 15% ಎಸ್‌ಸಿ ಒಳಮೀಸಲಾತಿಯಡಿ 5.3, 5.3 ಮತ್ತು 4.4ರಂತೆ ಮಾಡುವ ಸಂಬಂಧ ಚರ್ಚಿಸಲಾಯಿತು ಎಂದು ಹೇಳಿದರು.

ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಸರ್ವಾನುಮತದಿಂದ ಈ ಬಗ್ಗೆ ತೀರ್ಮಾನವಾಗಿದೆ. ಇದಕ್ಕೆ ಮುನಿಯಪ್ಪ, ತಿಮ್ಮಾಪೂರ, ಪ್ರಿಯಾಂಕ್ ಖರ್ಗೆ, ಮಹದೇವಪ್ಪ, ಸತೀಶ್ ಜಾರಕಿಹೊಳಿ ಒಪ್ಪಿಕೊಂಡಿದ್ದಾರೆ. ಯಾವುದೇ ಅಪಸ್ವರ ಇಲ್ಲದೇ ತೀರ್ಮಾನಕ್ಕೆ ಬರಲಾಗಿದೆ ಎಂದು ಸಿಎಂ ತಿಳಿಸಿದರು.

ಹೈಕೋರ್ಟ್ ತೀರ್ಮಾನದವರೆಗೆ 6% ಬ್ಯಾಕ್ ಲಾಗ್ ಆಗಿ ಪರಿಗಣಿಸಲಾಗುವುದು. ಹೈಕೋರ್ಟ್ ತೀರ್ಮಾನದ ಬಳಿಕ ಇದನ್ನು ತೀರ್ಮಾನಿಸಲು ನಿರ್ಧರಿಸಲಾಗಿದೆ. ಈ ಹಿಂದಿನ 6:6:5 ಒಳಮೀಸಲಾತಿ ಅಧಿಸೂಚನೆ ವಾಪಸ್ ಪಡೆದು ಇಂದಿನ ತೀರ್ಮಾನದಂತೆ 5.25, 5.25, 4.50ರ ಅಧಿಸೂಚನೆ ಹೊರಡಿಸಲಾಗುವುದು ಎಂದು ಮಾಹಿತಿ ನೀಡಿದರು.

ಬಜೆಟ್‌ನಲ್ಲಿ 56,432 ನೇಮಕಾತಿ ಮಾಡುವ ಘೋಷಣೆ ಮಾಡಲಾಗಿದೆ. ಈ ಸಂಬಂಧ ತುರ್ತು ಕ್ರಮ ತೆಗೆದುಕೊಳ್ಳಲು ತೀರ್ಮಾನಿಸಿದ್ದೇವೆ. ಈ ನೇಮಕಾತಿಯಲ್ಲಿ ಒಳಮೀಸಲಾತಿ ನೀಡಲಾಗುವುದು. ಸಿ ವರ್ಗಕ್ಕೆ ಲಭ್ಯವಾಗುವ ಹುದ್ದೆಗಳಲ್ಲಿ ಸುಮಾರು 20% 59 ಅಲೆಮಾರಿ ಸಮುದಾಯಕ್ಕೆ ಮೀಸಲಾಗಿಡಬೇಕು ಎಂದು ತೀರ್ಮಾನಿಸಲಾಗಿದೆ. ಅಂದರೆ ಸಿ ವರ್ಗದ 4 ಹುದ್ದೆಗಳಲ್ಲಿ 1 ಹುದ್ದೆ ಅಲೆಮಾರಿ ಸಮುದಾಯಕ್ಕೆ ಮೀಸಲಿಡಲಾಗುವುದು ಎಂದರು.ನೇಮಕಾತಿ ಕೂಡಲೇ ಆರಂಭವಾಗಲಿದೆ. ನಮ್ಮ ಪಕ್ಷದ ನಿಲುವು ಸಮ ಪಾಲು, ಸಮ್ಬಾಳು ಅನ್ನೋದು. ಯಾರಿಗೂ ಅನ್ಯಾಯ ಆಗಬಾರದು ಎಂಬುದು ನಮ್ಮ ಉದ್ದೇಶ. ನಾವು ಕೊಟ್ಟ ಮಾತು ಉಳಿಸಿಕೊಂಡಿದ್ದೇವೆ. ದಲಿತ ಸಂಘಟನೆಗಳು ಇದನ್ನು ಒಪ್ಪಿಕೊಳ್ಳುವ ವಿಶ್ವಾಸವಿದೆ ಎಂದು ಸಿಎಂ ಹೇಳಿದ್ದಾರೆ.

## ಸಾಹಿತ್ಯ ಸಂಘಟನೆಯಿಂದ ವಿಚಾರ ಗೋಷ್ಟಿ, ಕವಿಗೋಷ್ಟಿ- ಪ್ರವೀಣರೆಡ್ಡಿ ಗುಂಜಳ್ಳಿ

ನವ್ಯ ಸಾಹಿತ್ಯ, ಸಾಮಾಜಿಕ ವೈಚಾರಿಕ ಮುಖಾಮುಖಿ ವಿಷಯದ ಕುರಿತು ಡಾ.ರಾಜಶೇಖರ ಹಳೆಮನೆ ಮಾತನಾಡಲಿದ್ದಾರೆ. ಎರಡನೇ ಗೋಷ್ಟಿ ಪ್ರಗತಿಶೀಲ ಸಾಹಿತ್ಯ, ಸಮಾಜ ಮುಖಿ ನಡಿಗೆ ವಿಷಯದ ಕುಇರತು ಡಾ.ಜೆ.ಎಲ್.ಈರಣ್ಣ ಮಾತನಾಡಲಿದ್ದಾರೆ. ದಲಿತ ಬಂಡಾಯ ಸಾಹಿತ್ಯ, ಅಜ್ಞಾತಗಳ ಅನಾವರಣ ವಿಷಯವಾಗಿ ಡಾ.ಕೆ.ಖಾದರ ಬಾಷಾ ವಿಷಯ ಮಂಡಲಿಸಲಿದ್ದಾರೆ. ಅಧ್ಯಕ್ಷತೆಯನ್ನು ಹಿರಿಯ ಸಾಹಿತಿ ಜಯದೇವಿ ಗಾಯಕವಾಡವಹಿಸಲಿದ್ದಾರೆ. ನಂತರ ಕವಿಗೋಷ್ಟಿ ನಡೆಯಲಿದ್ದು ಅಧ್ಯಕ್ಷತೆಯನ್ನು ಕವಿ ಬಸವರಾಜ ಹೃತ್ಸಾಕ್ಷಿವಹಿಸಲಿದ್ದಾರೆ. ವೈ.ಬಿ.ಹಾಲಭಾವಿ ಆಶಯ ನುಡಿಗಳನ್ನಾಡಲಿದ್ದಾರೆ. ಕವಿಗಳಾದ ಕೊರೆನಲ್, ಅಭಿಷೇಕಬಳೆ ಮಸರಕಲ್, ಶರಣಬಸವ ಕೆ.ಗುಡಿದಿನ್ನಿ, ಅಂಬಮ್ಮ,ಪ್ರತಾಪ ಸಿಂಹ, ಮಾಜಾನ್ ಮಸ್ಕಿ, ಮುದಿರಾಜ ಬಾಣದ, ಶರೀಫ್ ಹಸಮಕಲ್, ಮಹಾದೇವ ಪಾಟೀಲ್, ಉಮರ ದೇವರಮನಿ, ವೇಣು ಜಾಲಿಬೆಂಚಿ, ಲಕ್ಷ್ಮಣ ಮಂಡಲಗೇರ, ಸುಖಲತಾ ನೆಲಹಾಳ ಸೇರಿ ಅನೇಕರು ಕವನ ವಾಚನ ಮಾಡಲಿದ್ದಾರೆ. ನಂತರ ಸಮಾರೋಪ ಸಮಾರಂಭ ನಡೆಯಲಿದೆ. ಹಿರಿಯ ಚಿಂತಕರಾದ ಡಾ.ಮೀನಾಕ್ಷಿ ಬ್ಯಾಳಿ ಸಮಾರೋಪ ನುಡಿಗಳನ್ನಾಡಲಿದ್ದಾರೆ. ಬಂಡಾಯ ಸಾಹಿತಿ ಬಾಬು ಭಂಡಾರಿಗಲ್ ಅಧ್ಯಕ್ಷತೆವಹಿಸಲಿದ್ದಾರೆ. ಭಗತ್‌ರಾಜ ನಿಜಾಮಕಾರಿ, ಡಾ.ಈರಣ್ಣ ಕೊಸಗಿ, ವೀರಹನುಮಾನ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಾಹಿತಿಗಳು, ಹೋರಾಟಗಾರರು, ಪ್ರಗತಿಪರರು, ವಿದ್ಯಾರ್ಥಿಗಳು, ಭಾಗವಹಿಸುವಂತೆ ಮನವಿ ಮಾಡಿದರು. ಈ ಸಂದರ್ಬದಲ್ಲಿ ಭಗತರಾಜ ನಿಜಾಮಕಾರಿ, ಬಾಬು ಭಂಡಾರಿಗಲ್, ಶ್ರೀನಿವಾಸ ಮರಡ್ಡಿ ಉಪಸ್ಥಿತರಿದ್ದರು.

## ಕನ್ನಡ ನಾಡು ನುಡಿ ರಕ್ಷಣೆಗೆ ಡಾ.ರಾಜಕುಮಾರ ಕೊಡುಗೆ ಅಪಾರ-ಸುರೇಶ ವರ್ಮಾ

ಡಾ. ರಾಜಕುಮಾರ್ ಅವರು ಕೇವಲ ಒಬ್ಬ ನಟ ಅಲ್ಲ. ಅವರು ಆದರ್ಶ ವ್ಯಕ್ತಿ ಯಾಗಿ ಕಾಣುತ್ತಾರೆ. ಗೋಕಾಕ ಚಳುವಳಿ ಮುಖಾಂತರ ಕನ್ನಡ ನಾಡಿಗೆ ಅವರು ಕೊಟ್ಟಂತಹ ಕೊಡುಗೆ ದೊಡ್ಡದು. ಮೇರು ನಟರಾಗಿದ್ದಾರೆ. ಅವರು, ಸಾಮಾಜಿಕ ಸಮಸ್ಯೆಗಳ ನಿವಾರಣೆಯ ಕಥಾಹಂದರದ ಹಲವಾರು ಚಲನಚಿತ್ರಗಳನ್ನು ನಮಗೆ ನೀಡಿದ್ದಾರೆ.

ಕನ್ನಡ ಅಭಿಮಾನವನ್ನು ತೋರಿದ್ದಾರೆ. ಅವರಂತೆ ನಾವೆಲ್ಲರೂ ನಾಡು-ನುಡಿಯ ಬಗ್ಗೆ ಅಭಿಮಾನವನ್ನು ಹೊಂದಬೇಕು. ಅವರ ಜೀವನದ ಸಾಮಾಜಿಕ ಕಾಳಜಿಯನ್ನು ಅರಿಯಬೇಕು. ಅಲ್ಲದೆ ಅವರ ಮಗನಾದ ಡಾ.ಪುನೀತ್ ರಾಜ್ ಕುಮಾರ್ ಅವರು ಸಹ ನಟನೆ ಸೇರಿದಂತೆ ಆನೇಕ ಸಾಮಾಜಿಕ ಕಾರ್ಯಗಳನ್ನು ಮಾಡಿದ್ದಾರೆ ಎಂದರು.

ವರನಟ ಡಾ.ರಾಜಕುಮಾರ್ ಅವರು ಸಾಮಾಜಿಕ ಸಂದೇಶ ಸಾರುವಂತಹ ಚಿತ್ರಗಳಲ್ಲಿ ನಟಿಸುವ ಮೂಲಕ ದಾದಾ ಸಾಹೇಬ್ ಫಾಲ್ಕೆ ಯಂತಹ ದೇಶದ ಅತ್ಯುನ್ನುತ ಅನೇಕ ಪ್ರಶಸ್ತಿಯನ್ನು ಪಡೆದುಕೊಂಡು ಕನ್ನಡಿಗರ ಮನೆ ಮಾತಾಗಿದ್ದಾರೆ. ಕನ್ನಡ ನಾಡು - ನುಡಿಯ ಅಸ್ಮಿತೆಯಾಗಿರುವ ಡಾ.ರಾಜಕುಮಾರ್ ಅವರು, ತಮ್ಮ ಚಲನಚಿತ್ರಗಳ ಮೂಲಕ ಸಮಾಜ ಸುಧಾರಣೆಗೆ ಅಪಾರ ಕೊಡುಗೆಯನ್ನು ನೀಡಿದ್ದಾರೆ ಎಂದರು.

ಕನ್ನಡ ಚಿತ್ರರಂಗವು ವಿಶ್ವದಲ್ಲೇ ಅತ್ಯಂತ ದೊಡ್ಡ ಮಟ್ಟದಲ್ಲಿ ಬೆಳೆಯಬೇಕು. ಎಂಬುದು ರಾಜಕುಮಾರ್ ಅವರ ಅಶಾವಾಗಿತ್ತು. ನಟನೆಯಲ್ಲಿ ತಮ್ಮನ್ನು ತಾವೇ ಮರೆತು ಹೋಗುತ್ತಿದ್ದರು. ಕರ್ನಾಟಕಕ್ಕೆ ಸಿಕ್ಕ ಮತ್ತು ಅದಕ್ಕಾಗಿ ಅವರನ್ನು ಮುತ್ತು ರಾಜ್ ಎಂದು ಕರೆಯಲಾಗುತ್ತದೆ. ರಾಯಚೂರಿನಲ್ಲಿ ಕನ್ನಡವನ್ನು ಬೆಳಸೋಣ, ರಾಯಚೂರು ಕನ್ನಡ ಭಾಷೆಯ ತವರೂರು ಆಗಿದೆ. ರಾಯಚೂರಿನಲ್ಲಿ ಕನ್ನಡವನ್ನು ಉಳಿಸಿ, ಬೆಳಸಲು ಎಲ್ಲರೂ ಶ್ರಮಿಸಬೇಕು ಎಂದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷರಾದ ಆರ್.ಗುರುನಾಥ ಅವರು ಮಾತನಾಡಿ, ಡಾ.ರಾಜ್‌ಕುಮಾರ್ ಅವರು ರಂಗಭೂಮಿಯಿಂದ ಬೆಳೆದು ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು. ಅವರನ್ನು ಅಭಿಮಾನಿಗಳು ಪ್ರೀತಿಯಿಂದ ಅಣ್ಣಾವ್ರು ಎಂದು ಕರೆದಿದ್ದಾರೆ. ಅವರಂತಹ ನಟನನ್ನು ಮತ್ತೆ ಕಾಣಲು ಸಾಧ್ಯವಿಲ್ಲ. ಡಾ.ರಾಜಣ್ಣ ಲಕ್ಷಾಂತರ ಅಭಿಮಾನಿಗಳನ್ನು ಹೊಂದಿದ್ದರು ಸಹ ಯಾವುದೇ ಪಕ್ಷದ ಜೊತೆಗೆ ಗುರುತಿಸಿಕೊಂಡಿಲ್ಲ. ಬಹುತೇಕ ಕಲಾವಿದರು ಡಾ.ರಾಜ್ ಕುಮಾರ್ ಅವರ ಹೆಸರು ಹೇಳಲೇಬೇಕು. ಅವರು ಆದರ್ಶಗಳನ್ನು ನಾವು, ನೀವು ಎಲ್ಲರೂ ಪಾಲಿಸಬೇಕು ಎಂದರು.

ಉಪನ್ಯಾಸಕರಾಗಿ ಡಾ.ದಂಡಪ್ಪ ಬಿರಾದಾರ್ ಅವರು ಮಾತನಾಡಿ, ರಾಜಕುಮಾರ್ ಅವರು 77 ವರ್ಷಗಳ ಜೀವನ ಅದ್ಬುತ ಪ್ರಯಾಣವಾಗಿತ್ತು. 1954ರಲ್ಲಿ ಬೇಡರ ಕಣ್ಣಪ್ಪ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದ ಅವರು 200ಕ್ಕೂ ಹೆಚ್ಚು ಚಿತ್ರಗಳಲ್ಲಿ ನಾಯಕ ನಟರಾಗಿ ನಟಿಸಿದ್ದಾರೆ. ಒಂದೇ ಚಿತ್ರದಲ್ಲಿ ಅಭಿನಯ ಹಾಗೂ ಗಾಯನ ಎರಡೂ ಕ್ಷೇತ್ರದಲ್ಲಿ ರಾಷ್ಟ್ರೀಯ ಪ್ರಶಸ್ತಿ ಪಡೆದ ದೇಶದ ಏಕೈಕ ನಟ ಡಾ.ರಾಜಕುಮಾರ್ ಅವರಾಗಿದ್ದಾರೆ. ಡಾ.ರಾಜಕುಮಾರ್ ಅವರು ನಟಿಸಿದ ಎಷ್ಟೋ ಚಿತ್ರದಿಂದ ಪ್ರೇರೇಪಿತರಾದ ಜನ ಅವರನ್ನು ಅನುಸರಿಸಿ ಸಮಾಜ ಸೇವೆಗೆ ಮುಂದಾಗಿರುವುದು ವಿಶೇಷವಾಗಿದೆ. ಅವರು ನಟನಾಗಿ ಮಾತ್ರವಲ್ಲದೇ ಒಬ್ಬ ಆದರ್ಶ ವ್ಯಕ್ತಿಯಾಗಿ ಕಾಣುತ್ತಾರೆ. ರಾಜಕುಮಾರ್ ಅವರು ಸಿನಿಮಾ ಕ್ಷೇತ್ರದ ಮೂಲಕ ಕನ್ನಡ ನಾಡು ನುಡಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅವರು ಹೆಚ್ಚಾಗಿ ಭಾಷೆ, ನೆಲ,ಜಲ ಮಹತ್ವದ ಕುರಿತ ಚಿತ್ರಗಳಿಗೆ ಒತ್ತು ನೀಡುತ್ತಿದ್ದರು. ರಾಜಕುಮಾರ್ ಅವರು ಅನೇಕ ಕಲಾವಿದರು, ಸಹ ನಟರಿಗೂ ವೈಯಕ್ತಿಕವಾಗಿ ಸಹಾಯ ಹಸ್ತವನ್ನು ಚಾಚುತ್ತಿದ್ದರು. ರಾಜಕುಮಾರ್ ಅವರು ಸರಳ ಜೀವನಕ್ಕೆ ಆದ್ಯತೆ ನೀಡುತ್ತಿದ್ದರು. ಜನರ ಹೃದಯದಲ್ಲಿ ನೆಲನಿಂತ ಮಾನವೀಯ ಗುಣವುಳ್ಳ ನಾಯಕ ನಟರಾಗಿದ್ದರು ಎಂದರು. ಅಭಿಮಾನಿಗಳಿಂದ ಗಾಯನ ಸಂಗೀತ: ಡಾ.ರಾಜ್ ಕುಮಾರ್ ಅವರ 97ನೇ ಜಯಂತಿ ಅಂಗವಾಗಿ ಉದಯ ಶಂಕರ್ ಅವರಿಂದ ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು, ನಾವಾಡುವ ನುಡಿಯೇ ಕನ್ನಡ ನುಡಿ, ಕೆ.ಕೆ.ಆರ್.ಸಿ.ಟಿ ನೌಕರ ಗುರು ದೇವರಮನಿ ಅರಕೇರಾ ಅವರು ಆ ದೇವರ ಹಾಡು ಇದು ಸೇರಿದಂತೆ ಪ್ರತಾಪ ರೆಡ್ಡಿ, ಮೈತ್ರಿಕರ್, ಮಲ್ಲಿಕಾರ್ಜುನ ಅವರಿಂದ ಹತ್ತು ಹಲವು ಹಾಡುಗಳನ್ನು ಆಡಲಾಯಿತು. ಈ ಸಂದರ್ಭದಲ್ಲಿ ವೆಂಕಟೇಶ್ವರ ಕಾಲೇಜಿನ ಪ್ರಾಂಶುಪಾಲ ನರಸಿಂಹ ಸಾಗರ್, ಕಸಾಪ ಕಾರ್ಯದರ್ಶಿ ರೇವತ್ ರಾವ್, ಅನಿಲ ಕರ್ನಾಯ ರಾಜ್ ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಬಸವರಾಜ, ಮಹಿಳಾ ಘಟಕದ ಅಧ್ಯಕ್ಷ ನಿರ್ಮಲ ಬೆಣ್ಣೆ, ಮಹಿಳಾ ಮುಖಂಡರಾದ ಪಿ.ಸುರೇಖಾ ಚೆನ್ನರೆಡ್ಡಿ ಸೇರಿದಂತೆ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಇದ್ದರು. ಪ್ರತಿಭಾ ಗೋನಾಳ ಅವರು ಕಾರ್ಯಕ್ರಮದ ನಿರೂಪಣೆ ಮಾಡಿದರು.

## ಚುನಾವಣೆ ಮತ್ತೆ ಅತಂತ್ರ..!


ಹೊಸದಾಗಿ ರಚನೆಯಾಗಿದ್ದರಿಂದ ಆಕಾಂಕ್ಷಿಗಳು ಸ್ಪರ್ಧೆಗೆ ಸಿದ್ದತೆ ನಡೆಸಿದ್ದರು. ಸರ್ಕಾರ ಅಧಿಸೂಚನೆ ರದ್ದುಗೊಳಸಿದ್ದರಿಂದ ಚುನಾವಣೆಗಳು ಮತ್ತಷ್ಟು ವಿಳಂಭವಾಗುವ ಜೊತೆಗೆ ಹೊಸ ಕ್ಷೇತ್ರಗಳ ಬದಲಾಗುವ ಸಾಧ್ಯತೆಗಳು ಹೆಚ್ಚಳವಾಗಿವೆ. ಸರ್ಕಾರ ನಡೆಯಿಂದ ಆಕಾಂಕ್ಷಿಗಳಲ್ಲಿ ಇರುಸುಮುರುಸು ಆಗುವಂತಾಗಿದೆ. ಹೊಸ ತಾಲೂಕಗಳ ರಚನೆ, ಜಿಲ್ಲಾ ಮತ್ತು ತಾಲೂಕ ಪಂಚಾಯ್ತಿಗಳ ಗಡಿ ನಿಗಧಿಗೆ ರಾಜಕೀಯ ಆಸಕ್ತಿ ಮೇಲೆ ಬದಲಾವಣೆ ಮಾಡಲಾಗಿತ್ತು. ಆದರೀಗ ಪುನರ್ ಕ್ಷೇತ್ರಗಳ ವಿಗಂಡನೆ ನಡೆಯಬೇಕಿದ್ದರಿಂದ ಬದಲಾಗುವ ಸಾಧ್ಯತೆಗಳು ಹೆಚ್ಚಳವಾಗಿವೆ. ಜಿಲ್ಲಾ ಮತ್ತು ತಾಲೂಕ ಪಂಚಾಯ್ತಿಗಳ ಅವಧಿ ಪೂರ್ಣಗೊಂಡು ವರ್ಷಗಳೇ ಉರುಳಿದರೂ ಚುನಾವಣೆ ನಡೆಸಲು ಸರ್ಕಾರ ಆಸಕ್ತಿ ತೋರುತ್ತಿಲ್ಲ. ಮೀಸಲು ,ಕ್ಷೇತ್ರಗಳ ರಚನೆಯಲ್ಲಿಯೇ ಕಾಲಹರಣವಾಗುತ್ತಿದೆ.ಈಗ ಮತ್ತೇ ಕ್ಷೇತ್ರಗಳ ಪುನರ್ ವಿಗಂಡನೆ ಪ್ರಕ್ರಿಯೆ ನಡೆಯಬೇಕಿರುವದರಿಂದ ಮತ್ತಷ್ಟು ವಿಳಂಬವಾಗುವ ಸಾಧ್ಯತೆಗಳು ಹೆಚ್ಚಳವಾಗಿವೆ. ಈಗಾಗಲೇ ರಾಜ್ಯ ಸರ್ಕಾರ ಶೀಘ್ರದಲ್ಲಿ ಜಿಲ್ಲಾ ಮತ್ತು ತಾಲೂಕ ಪಂಚಾಯ್ತಿ ಚುನಾವಣೆ ನಡೆಸುವದಾಗಿ ಘೋಷಿಸಿದೆಯಾದರೂ ರಾಜಕೀಯ ಲೆಕ್ಕಚಾರಕ್ಕೆ ಪಂಚಾಯ್ತಿ ಚುನಾವಣೆಗಳು ಸಿಲುಕಿದಂತಾಗಿದೆ.

## ಕಾಂಗ್ರೆಸ್ ಮೇಲೆ ಗೂಬೆ ಕೂರಿಸುವ ಪ್ರಯತ್ನ- ನಿರ್ಮಲಾ ಬೆಣ್ಣೆ ಆರೋಪ

ಮಾಡುತ್ತಿದ್ದಾರೆ. ಕಾಂಗ್ರೆಸ್ ಮಹಿಳಾ ಮೀಸಲು ಪರವಾಗಿದೆ ಎಂದರು.ಪಂಚರಾಜ್ಯಗಳ ಚುನಾವಣೆ ಹಿನ್ನಲೆಯಲ್ಲಿ ಅವಸರದಲ್ಲಿ ಕಾಯ್ದೆ ರೂಪಿಸಲು ಹೋಗಿದ್ದ ಬಿಜೆಪಿ ರಾಜಕೀಯ ಹುನ್ನಾರದಿಂದ ಸೋಲಾಗಿವೆ. ಕ್ಷೇತ್ರ ಪುನರ್ ವಿಗಂಡನೆ ಕುರಿತು ಸ್ಪಷ್ಟತೆಯಿಲ್ಲದೇ ಇರುವದರಿಂದ ರಾಜಕೀಯ ದುರುದ್ದೇಶದ ಪ್ರಯತ್ನ ವಿಫಲವಾಗಿದೆ ಎಂದರು. ಈ ಸಂದರ್ಬದಲ್ಲಿ ಆರ್‌ಡಿಎ ಸದಸ್ಯ ಪ್ರತಿಭಾರೆಡ್ಡಿ, ಸುರೇಖಾ, ಗಾಯತ್ರಿ, ಜ್ಯೋತಿ, ಅಶ್ವಿನಿ, ಬಿ.ಉಮಾ, ರಹೇನಾಬೇಗಂ ಇದ್ದರು.

# ರಾಜ್ಯದಲ್ಲಿ ಇನ್ನೂ ಒಂದು ವಾರ ತಾಪಮಾನ ಹೆಚ್ಚಳ ಮುಂದುವರಿಕೆ
# ಕರಾವಳಿ ಜಿಲ್ಲೆಗಳಲ್ಲಿ ಸಾಧಾರಣ ಮಳೆ ನಿರೀಕ್ಷೆ

**ಬೆಂಗಳೂರು,ಏ.24**-ರಾಜ್ಯಾದ್ಯಂತ ಇನ್ನೂ ಒಂದು ವಾರ ತಾಪಮಾನ ಏರಿಕೆ ಕಂಡುಬರಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ. ಬೆಂಗಳೂರು ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಈಗಾಗಲೇ ಬಿಸಿಲ ಬೇಗೆಗೆ ಜನರು ಬಳಲಿ ಬೆಂಡಾಗಿದ್ದು, ರಾಯಚೂರು ಹಾಗೂ ಕಲಬುರಗಿಯಲ್ಲಿ ಉಷ್ಣಾಂಶ 41 ಡಿಗ್ರಿ ತಲುಪಿದೆ. ಇನ್ನು ಬೆಂಗಳೂರಿನಲ್ಲಿ 36 ಡಿಗ್ರಿ ಉಷ್ಣಾಂಶ ದಾಖಲಾಗಿದೆ. ಮುಂದಿನ ಒಂದು ವಾರ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 40-42 ಡಿಗ್ರಿ ಉಷ್ಣಾಂಶ ದಾಖಲಾಗುವ ಸಾಧ್ಯತೆ ಅಧಿಕವಾಗಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.




ರಾಜಧಾನಿ ಬೆಂಗಳೂರಿನಲ್ಲಿ ಗರಿಷ್ಠ ತಾಪಮಾನ 36 ಡಿಗ್ರಿ ಸೆಲ್ಸಿಯಸ್‌ವರೆಗೆ ಕಂಡುಬರುತ್ತಿದ್ದು, ಕನಿಷ್ಠ ತಾಪಮಾನ 22 ಡಿಗ್ರಿ ಸೆಲ್ಸಿಯಸ್ ಇದೆ. ರಾಯಚೂರಿನಲ್ಲಿ ಗರಿಷ್ಠ ತಾಪಮಾನ 40 ಡಿಗ್ರಿ ಸೆಲ್ಸಿಯಸ್ ಇದ್ದು, ಕನಿಷ್ಠ ತಾಪಮಾನ 28 ಡಿಗ್ರಿ ಸೆಲ್ಸಿಯಸ್ ದಾಖಲಾಗುತ್ತಿದೆ. ಕರಾವಳಿ ಜಿಲ್ಲೆಗಳಲ್ಲಿ ಉಷ್ಣ ಅಲೆ ಕಂಡು ಬರುತ್ತಿದ್ದು, ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ತಾಪಮಾನ ಏರಿಕೆಯಾಗುತ್ತಲೇ ಇರುವುದರಿಂದ ಜನರು ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ಅನಗತ್ಯವಾಗಿ ಬಿಸಿಲಿನಲ್ಲಿ ಓಡಾಡದಿರುವುದು ಉತ್ತಮ. ಉಷ್ಣಾಘಾತದಿಂದ ರಕ್ಷಿಸಿಕೊಳ್ಳಲು ನಿಯಮಿತವಾಗಿ ನೀರು, ತಂಪು ಪಾನೀಯಗಳನ್ನ ಸೇವಿಸಬೇಕು. ಎಳನೀರು, ಮಜ್ಜಿಗೆ ಅಥವಾ ಮನೆಯಲ್ಲಿ ತಯಾರಿಸಿದ ಹಣ್ಣಿನ ರಸಗಳನ್ನು ಸೇವಿಸಿ. ತಿಳಿ ಬಣ್ಣದ, ಸಡಿಲವಾದ ಹತ್ತಿ ಬಟ್ಟೆಗಳನ್ನು ಧರಿಸಿ. ಹೊರಗೆ ಹೋಗುವಾಗ ಛತ್ರಿ ಅಥವಾ ಟೋಪಿಯನ್ನು ಬಳಸಿ. ಕೆಫೀನ್ (ಕಾಫಿ/ಟೀ) ಮತ್ತು ಹೆಚ್ಚಿನ ಸಕ್ಕರೆಯುಕ್ತ ಪಾನೀಯಗಳ ಸೇವನೆ ಕಡಿಮೆ ಮಾಡುವಂತೆ ವೈದ್ಯರು ಸಲಹೆ ನೀಡಿದ್ದಾರೆ.

ರಾಯಚೂರಲ್ಲಿ ಸೂರ್ಯ ಪ್ರತಾಪ: ಬಿಸಿಲೂರು ಎಂದು ಕರೆಯುವ ರಾಯಚೂರು ಜಿಲ್ಲೆಯಲ್ಲಿ ರಾಜ್ಯದಲ್ಲಿಯೇ ಗರಿಷ್ಠ ತಾಪಮಾನ ದಾಖಲಾಗುತ್ತಿದೆ.

ಎಪ್ರಿಲ್ 18 ರಂದು ರಾಜ್ಯದಲ್ಲೇ ಅತಿಹೆಚ್ಚಿನ ಉಷ್ಣಾಂಶ ದಾಖಲಾಗಿತ್ತು. ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ಮೇಲ್ವಿಚಾರಣಾ ಕೇಂದ್ರ ಬಿಡುಗಡೆ ಮಾಡಿದ ವರದಿ ಪ್ರಕಾರ, ಜಿಲ್ಲೆಯಲ್ಲಿ ಗರಿಷ್ಠ 44.2 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿತ್ತು.

ರಾಯಚೂರು ತಾಲೂಕಿನ ದೇವಸೂಗೂರು ಗ್ರಾಮದಲ್ಲಿ 44.2 ಡಿಗ್ರಿ, ಹಾಗೂ ಕಲಮಲಾ ಗ್ರಾಮದಲ್ಲಿ 44 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು. ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಕನಿಷ್ಠ 42 ರಿಂದ ಗರಿಷ್ಠ 44.2 ಡಿಗ್ರಿವರೆಗೆ ಉಷ್ಣಾಂಶ ಕಂಡುಬಂದಿದ್ದು, ಬಿಸಿಲಿನ ತೀವ್ರತೆ ದಿನೇ ದಿನೇ ಹೆಚ್ಚುತ್ತಿದೆ. ಕಳೆದ ಕೆಲವು ದಿನಗಳಿಂದಲೇ 40 ಡಿಗ್ರಿ ಸೆಲ್ಸಿಯಸ್ ಮೀರಿದ ತಾಪಮಾನ ದಾಖಲಾಗುತ್ತಿದ್ದರೂ, ಅದು ಮತ್ತಷ್ಟು ಏರಿಕೆಯಾಗಿದ್ದು, ಜನರು ತತ್ತರಿಸುವಂತಾಗಿದೆ.

# ಗ್ಯಾರಂಟಿಗಳಿಂದ ರಾಜ್ಯದ ಖಜಾನೆ ಖಾಲಿ, ಶ್ರೀಲಂಕಾದ ಪರಿಸ್ಥಿತಿ ಕರ್ನಾಟಕಕ್ಕೂ ಬರಲಿದೆ: ಹೆಚ್‌ಡಿಕೆ

**ಮೈಸೂರು,ಏ.24**-ಕಾಂಗ್ರೆಸ್ ಪಕ್ಷದ ಗ್ಯಾರಂಟಿಗಳಿಂದ ಅಭಿವೃದ್ಧಿಶೀಲ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಆರ್ಥಿಕ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.



ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಬಸವನಪುರ, ಗೇರದಡ ಹಾಗೂ ಕೆಂಚನಹಳ್ಳಿ ಗ್ರಾಮಗಳ ಶ್ರೀ ಮೇಲನಕಟ್ಟೆ ಗಣಪತಿ ದೇವಾಲಯ ಲೋಕಾರ್ಪಣೆ ಹಾಗೂ ಹೊಸ ಅಗ್ರಹಾರ ಗ್ರಾಮದಲ್ಲಿನ ಶ್ರೀ ಬಸವೇಶ್ವರ ಸ್ವಾಮಿ ದೇವಾಲಯದ ಗೋಪುರ ಲೋಕಾರ್ಪಣೆ ಹಾಗೂ ಶ್ರೀ ಬಸವೇಶ್ವರ ದೇವರ ಪ್ರಾಣಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿಂದು ಪಾಲ್ಗೊಂಡು ಅವರು ಮಾತನಾಡಿದರು.

ಮಹಿಳೆಯರಿಗೆ ₹2000 ಕೊಡುತ್ತಿದ್ದಾರೆ ಎಂಬುದೇನೋ ಸರಿ. ಆದರೆ, ಆ ಮೊತ್ತವನ್ನು ರಾಜ್ಯ ಸರ್ಕಾರ ಹೇಗೆ ಕೊಡುತ್ತಿದೆ ಎಂಬುದನ್ನು ಜನರು ಗಮನವಿಟ್ಟು ನೋಡಬೇಕು. ಸಾಲ ಮಾಡಿ ತುಪ್ಪ ತಿನ್ನು ಎನ್ನುವ ಹಾಗೆ ಸರ್ಕಾರ ಲಕ್ಷಾಂತರ ಕೋಟಿ ಸಾಲ ಮಾಡಿ ಗ್ಯಾರಂಟಿ ನೀಡುತ್ತಿದೆ. ಈಗಾಗಲೇ ಈ ಸರ್ಕಾರ 7,26,000 ಕೋಟಿ ರೂಪಾಯಿ ಸಾಲ ಮಾಡಿದೆ. ಈ ಮೂಲಕ ರಾಜ್ಯದ 6.30 ಕೋಟಿ ಕನ್ನಡಿಗರಲ್ಲಿ ತಲಾ ಕನಿಷ್ಠ ಒಂದು ಲಕ್ಷ ರೂಪಾಯಿ ಸಾಲ ಹೊರಿಸಿದೆ ಎಂದು ತಿಳಿಸಿದರು.

ಇದನ್ನು ನಾನು ಎಲ್ಲಿ ಬೇಕಾದರೂ ಹೇಳುತ್ತೇನೆ. ಯಾವ ವೇದಿಕೆಯಲ್ಲಿ ಬೇಕಾದರೂ ಚರ್ಚೆಗೆ ತಯಾರಿದ್ದೇನೆ. ಅವರಿಗೆ ಧೈರ್ಯವಿದ್ದರೆ ಚರ್ಚೆಗೆ ಬರಲಿ ಎಂದು ರಾಜ್ಯ ಸರ್ಕಾರಕ್ಕೆ ಸವಾಲೆಸೆದರು.

ಗ್ಯಾರಂಟಿಗಳ ಪರಿಣಾಮದಿಂದ ರಾಜ್ಯದ ಖಜಾನೆ ಖಾಲಿಯಾಗಿದೆ. ಸಕಾಲಕ್ಕೆ ಸರ್ಕಾರಿ ನೌಕರರಿಗೆ ಸಂಬಳ ಕೊಡುವ ಶಕ್ತಿಯನ್ನು ಸರ್ಕಾರ ಕಳೆದುಕೊಂಡಿದೆ. ಹಾಗೆಯೇ ಗ್ಯಾರಂಟಿಗಳ ಆಮಿಷವೊಡ್ಡಿ ಹಿಮಾಚಲ ಪ್ರದೇಶದಲ್ಲಿ ಅಧಿಕಾರ ಹಿಡಿದಿರುವ ಕಾಂಗ್ರೆಸ್ ಪಕ್ಷವು ಆ ರಾಜ್ಯವನ್ನು ಆರ್ಥಿಕವಾಗಿ ಹಾಳು ಮಾಡಿದೆ. ಅಧಿಕಾರಿಗಳ ವೇತನದಲ್ಲಿ ಕಡಿತ ಮಾಡುತ್ತಿದೆ. ಸ್ವತಃ ರಾಜ್ಯದ ಅಧಿಕಾರಿ ವರ್ಗದ ಮುಖ್ಯಸ್ಥರಾಗಿರುವ ಮುಖ್ಯ ಕಾರ್ಯದರ್ಶಿ ವೇತನದಲ್ಲಿ ಕಡಿತ ಮಾಡಲಾಗಿದೆ ಎಂಬ ವರದಿಗಳು ಮಾಧ್ಯಮದಲ್ಲಿ ಬಂದಿದೆ. ಹಿಮಾಚಲ ಪ್ರದೇಶದ ಪರಿಸ್ಥಿತಿ ಕರ್ನಾಟಕಕ್ಕೆ ಬರಲಿದೆ ಎಂದು ಅವರು ಟೀಕಿಸಿದರು.

ಕೆಲವು ವರ್ಷಗಳ ಹಿಂದೆ ಶ್ರೀಲಂಕಾದ ಪರಿಸ್ಥಿತಿ ಏನಾಗಿತ್ತು ಎಂಬುದನ್ನು ಎಲ್ಲರೂ ಗಮನಿಸಿದ್ದೇವೆ. ಇವರು ಇದೇ ರೀತಿಯಲ್ಲಿ ಆರ್ಥಿಕ ವ್ಯವಸ್ಥೆಯನ್ನು ಕಳಪೆಯಾಗಿ ನಿರ್ವಹಣೆ ಮಾಡಿದರೆ ಶ್ರೀಲಂಕಾದ ಪರಿಸ್ಥಿತಿಯೇ ಕರ್ನಾಟಕಕ್ಕೂ ಬರಲಿದೆ ಎಂದು ಎಚ್ಚರಿಕೆ ನೀಡಿದರು.

ಮಹಿಳೆಯರು 2,000 ಹಣ ಪಡೆದು ಸಂಸಾರ ನಿರ್ವಹಣೆ ಮಾಡಲು ಸಾಧ್ಯವೇ? ನಿಮಗೆ ಇಲ್ಲಿ ಗೃಹಲಕ್ಷ್ಮಿ ಎಂದು ಹಣ ಕೊಡುತ್ತಾರೆ. ಬೆಲೆ ಏರಿಕೆ ಮತ್ತು ತೆರಿಗೆ ಹೇರಿಕೆಯಿಂದ ನಿಮ್ಮ ಪತಿಗಳ ಜೇಬಿಗೆ ಕತ್ತರಿ ಹಾಕುತ್ತಿದ್ದಾರೆ. ಅಲ್ಲದೇ, ಮನಸೋಇಚ್ಛೆ ಸಾಲ ಮಾಡಿ ನಿಮ್ಮ ಮಕ್ಕಳ ಮೇಲೆಯೂ ಸಾಲ ಹೊರಿಸುತ್ತಿದ್ದಾರೆ ಎಂದು ಕುಮಾರಸ್ವಾಮಿ ಹೇಳಿದರು.

ಮೇಲನಕಟ್ಟೆ ಗಣಪತಿ ದೇವಾಲಯ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ಬಸವನಪುರ, ಗೇರದಡ ಹಾಗೂ ಕೆಂಚನಹಳ್ಳಿ ಗ್ರಾಮಗಳ ಶ್ರೀ ಮೇಲನಕಟ್ಟೆ ಗಣಪತಿ ದೇವಾಲಯವನ್ನು ಲೋಕಾರ್ಪಣೆ ಮಾಡಿದ ಭಾಗ್ಯ ನನ್ನದಾಯಿತು. ಮಾಜಿ ಮಂತ್ರಿಗಳಾದ ಸಾ.ರಾ.ಮಹೇಶ್ ಅವರೊಂದಿಗೆ ಭಕ್ತಿ ಶ್ರದ್ಧೆಯಿಂದ ಪಾಲ್ಗೊಂಡ ಈ ಕಾರ್ಯಕ್ರಮವು ಬಹಳ ವಿಶೇಷವಾಗಿತ್ತು. ಪ್ರಕೃತಿಯ ನಡುವೆ ನಿರ್ಮಾಣಗೊಂಡಿರುವ ಈ ಪುಟ್ಟ ದೇವಾಲಯ ಮನಸ್ಸಿಗೆ ಬಹಳಷ್ಟು ನೆಮ್ಮದಿಯನ್ನು ನೀಡುವ ಪುಣ್ಯಸ್ಥಳ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಾಲಿಗ್ರಾಮ ಯೋಗ ನರಸಿಂಹ ಸ್ವಾಮಿಯ ದರ್ಶನ ಪಡೆದ ಹೆಚ್ಡಿಕೆ: ಇವೆರಡು ಕಾರ್ಯಕ್ರಮಗಳ ನಂತರ ಸಾಲಿಗ್ರಾಮದ ಶ್ರೀ ಯೋಗ ನರಸಿಂಹಸ್ವಾಮಿ ದೇವಾಲಯಕ್ಕೆ ಆಗಮಿಸಿ ಪೂಜೆ ಸಲ್ಲಿಸಿದರು. ಮುಖಂಡರ ಜೊತೆ ದೇಗುಲಕ್ಕೆ ಬಂದ ಸಚಿವರು ಕೆಲಕಾಲ ಭಗವಂತನ ಸನ್ನಿಧಿಯಲ್ಲಿ ಕಾಲ ಕಳೆದರು.

## ಆನ್‌ಲೈನ್ ಲೋನ್ ಕೊಡಿಸುವದಾಗಿ ವಂಚನೆ: ಮೂವರ ಬಂಧನ

ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿತ್ತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ ಐಪಿಎಸ್ ಅವರ ಮಾರ್ಗದರ್ಶನದಲ್ಲಿ, ಸೈಬರ್ ಕ್ರೈಂ ಪೊಲೀಸ್ ಠಾಣೆಯ ಡಿವೈಎಸ್‌ಪಿ ಶಾಂತವೀರ ಈ. ನೇತೃತ್ವದಲ್ಲಿ ದಾಳಿ ನಡೆಸಿ ಆರೋಪಿಗಳಾದ ಮಹೇಶ ಚಿಲ್ಲಾಳ, ವೀರೇಶ, ಮತ್ತು ಪ್ರಭು ಎಂಬ ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರಿಂದ ಅಪರಾಧಕ್ಕೆ ಬಳಸಿದ 8 ಮೊಬೈಲ್ ಫೋನ್‌ಗಳು, ಸಿಮ್ ಕಾರ್ಡ್‌ಗಳು, ಒಂದು ಕಾರು ಮತ್ತು ಒಂದು ಯಮಹಾ ಮೋಟಾರ್ ಸೈಕಲ್ ಜಪ್ತಿ ಮಾಡಲಾಗಿದೆ. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದೆ.ಉತ್ತಮ ಕಾರ್ಯ ನಿರ್ವಹಿಸಿದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಪ್ರಶಂಸೆ ವ್ಯಕ್ತಪಡಿಸಲಾಗಿದೆ.

## ಜಿಲ್ಲಾ ಗುತ್ತಿಗೆ ನೌಕರರ ಸಮಾವೇಶ:ಗುತ್ತಿಗೆ ಪದ್ದತಿ ರದ್ದುಗೊಂಡರೂ ಸಂಘಟಿತ ಹೋರಾಟ ಕೊರತೆಯಿಂದ ಶೋಷಣೆ-ಮಾನಸಯ್ಯ

ಅವರನ್ನು ನಂಬಿದರೆ ಸಾಯೊವರೆಗೆ ಖಾಯಂ ಆಗೊದಿಲ್ಲ, ಸರಿಯಾಗಿ ವೇತನ ಸಿಗೋದಿಲ್ಲ, ಪ್ರಶ್ನೆ ಮಾಡುವುದನ್ನು ಮೈಗೂಡಿಸಿಕೊಳ್ಳಬೇಕು ಎಂದರು. ಸಮಾವೇಶದಲ್ಲಿ ಚರ್ಚಿಸಿದ ವಿಷಯಗಳನ್ನು ಸರ್ಕಾರಕ್ಕೆ ತಲುಪಿಸುವ ಕೆಲಸ ಮಾಡಬೇಕು, ಜಿಲ್ಲಾ, ವಿಭಾಗ, ರಾಜ್ಯ ಮಟ್ಟದಲ್ಲಿ ಸಮಾವೇಶ ನಡೆಸಿ ರಾಜ್ಯ ಮಟ್ಟದಲ್ಲಿ ಬಹು ದೊಡ್ಡ ಹೋರಾಟಕ್ಕೆ ಎಲ್ಲರೂ ಸಿದ್ದರಾಗಬೇಕು ಎಂದರು. ಪ್ರಗತಿಪರ ಮುಖಂಡ ಸುರೇಶ ಭದ್ರಾವತಿ ಮಾತನಾಡಿ, ಕಳೆದ 40 ವರ್ಷಗಳಿಂದ ಎಲ್ಲಾ ಇಲಾಖೆಗಳಲ್ಲಿ ಹೊರಗುತ್ತಿಗೆಯಾಗಿ ಕೆಲಸ ಮಾಡುತ್ತಿರುವ ಕಾರ್ಮಿಕರು ಖಾಯಂ ಆಗುತ್ತಿಲ್ಲ, ಕೆಲಸ ಖಾಯಂ ಆದರೆ ನಮ್ಮನ್ನು ಖಾಯಂ ಮಾಡುತ್ತಿಲ್ಲವೇಕೆ, ಖಾಯಂ ಆಗಿರುವವರು ಅದೇ ಕೆಲಸ ಮಾಡುತ್ತೇವೆ ಅವರಿಗೆ ಹೆಚ್ಚಿನ ವೇತನ ನಮಗೇಕೆ ಕಡಿಮೆ ಇದನ್ನು ಗಟ್ಟಿಯಾಗಿ ಹೇಳಬೇಕಾಗಿದೆ ಆದರೆ ಕೇಳುತ್ತಿಲ್ಲ ಇಂದೋ ನಾಳೆ ಖಾಯಂ ಮಾಡ್ತಾರೆ ಅಂತ ಕೇಳೊವರೆಗೆ ಯಾರು ಮಾಡೋದಿಲ್ಲ, ಸರಿಯಾಗಿ ವೇತನ ಸಿಗೋದಿಲ್ಲವೆಂದರು.

ಗುತ್ತಿಗೆ ಕಾರ್ಮಿಕರು ಎಲ್ಲರ ಸಮಸ್ಯೆ ಒಂದೇ ಖಾಯಂ ಮಾಡಬೇಕು, ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು, ಎಲ್ಲಾ ಇಲಾಖೆಗಳು ಗುತ್ತಿಗೆ ಕಾರ್ಮಿಕ ಮೇಲೆ ನಡೆಯುತ್ತಿದೆ, ಸರ್ಕಾರ ಮಾತ್ರ ಖಾಯಂ ಮಾಡುತ್ತಿಲ್ಲ, ಜೀತದಾಳುಗಳಂತೆ ದುಡಿಸಿಕೊಳ್ಳುತ್ತಿದ್ದಾರೆ,ಗುತ್ತಿಗೆ ಪದ್ದತಿ ನಿರ್ಮೂಲನೆಯಾಗಿ ಖಾಯಂ ಮಾಡಬೇಕು, ಯುವಜನ, ವಿದ್ಯಾರ್ಥಿ, ಕೃಷಿ, ರೈತ, ಕಾರ್ಮಿಕ ಸಂಘಟನೆ ಎಲ್ಲರೂ ಈ ಬಗ್ಗೆ ಪ್ರಶ್ನಿಸಬೇಕು, ಎಲ್ಲಿಯವರೆಗೆ ನಾವು ಕೇಳೊದಿಲ್ಲವೆ ಅಲ್ಲಿಯವರೆಗೆ ಅವರು ಕೊಡೊದಿಲ್ಲವೆಂದರು.ಟಿಯುಸಿನ ರಾಜ್ಯಾಧ್ಯಕ್ಷ ಎಂಡಿ ಅಮೀರ್ ಅಲಿ ಮಾತನಾಡಿ, ಸರ್ಕಾರ ಕೂಲಿ ಮಾಡಿದ ಕಾರ್ಮಿಕರಿಗೆ ಕೂಲಿ ನೀಡುತ್ತಿಲ್ಲ, ಕೂಲಿ ಕೇಳಲು ಹೋರಾಟ, ಕೆಲಸ ಕೊಡಲು ಹೋರಾಟ, ಮಾಡಬೇಕಾದ ಅನಿವಾರ್ಯತೆ ಇದೆ, ರಾಜ್ಯದಲ್ಲಿ ಎಲ್ಲಾ ಇಲಾಖೆಗಳು, ಆಸ್ಪತ್ರೆ, ನೀರಾವರಿ, ವಸತಿ ನಿಲಯಗಳು, ಶಾಲೆಗಳು, ಇವರೆಲ್ಲವೂ ಖಾಯಂ ಆದರೆ ಇದರಲ್ಲಿ ಕೆಲಸ ಮಾಡುವವರು ಖಾಯಂ ಮಾಡುತ್ತಿಲ್ಲವೇಕೆ, ಖಾಯಂ ಮಾಡುವವರೆಗೆ ಹೊರಾಟ ಮಾಡಬೇಕು, ಖಾಯಂ ಮಾಡೋದಿಲ್ಲ ಅಲ್ಲಿವರೆಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು, ಕಾನೂನು ಹೇಳುತ್ತೆ, ಕೋರ್ಟ್ ಆದೇಶ ನೀಡಿದೆ, ಆದರೆ ಪಾಲನೆ ಆಗುತ್ತಿಲ್ಲ, ಸರ್ಕಾರದ ವಿರುದ್ಧ ಒಕ್ಕೊರಿಲಿನ ಕೂಗು ಮುಟ್ಟಬೇಕು ಎಂದರು.

ಸಮಾವೇಶಕ್ಕೆ ಸಾಕಷ್ಟು ಕಾರ್ಮಿಕರು ಸೇರಬೇಕು, ಆದರೆ ಕಡಿಮೆಯಾಗಿದೆ, ಕಾರ್ಮಿಕರಲ್ಲಿನ ಚಮಚಾಗಳು ಮಾತುಕೇಳಿ ಸಾಕಷ್ಟು ಕಾರ್ಮಿಕರು ಬಂದಿಲ್ಲ, ಸಭೆಗಳಲ್ಲಿ ಇದನ್ನು ಚರ್ಚೆ ಮಾಡಬೇಕಾಗಿದೆ, ಎಲ್ಲಾ ಕಾರ್ಮಿಕರು ಕೂಗು ಒಂದೆಯಾಗಿರಬೇಕು, ಒಗ್ಗಟ್ಟು ಸಹ ಇರಬೇಕು, ಒಗ್ಗಟ್ಟು ಇಲ್ಲದಿದ್ದರೆ ಯಾವುದೇ ಕೆಲಸ ಆಗೋದಿಲ್ಲ, ಸರ್ಕಾರದ ವಿರುದ್ಧ ನಾವು ಹೋರಾಟದ ಮಾಡಬೇಕಾಗಿದೆ ಎಂದರು.ಕಾರ್ಮಿಕರ ಕಾಯ್ದೆ ಪ್ರಕಾರ ವೇತನ, ಇಎಸ್‌ಐ, ಪಿಎಫ್, ಗ್ರಾಜ್ಯುಟಿ, ರಜೆ, ಸೇರಿದಂತೆ ಅನೇಕ ಸೌಲಭ್ಯಗಳು ಸಿಗಬೇಕು, ಸಿಗಬೇಕೆಂದರೆ ನಾವು ಕೇಳಬೇಕು, ಸರ್ಕಾರವೇ ಹೇಳುತ್ತೆ ಸಂವಿಧಾನ ಕಾಯ್ದೆ ಅಂತ ಆದರೆ ಉಲ್ಲಂಘನೆ ಮಾಡುತ್ತಿದೆ, ಅದನ್ನು ಕೇಳೋರು ಯಾರು ನಾವು ಪ್ರಶ್ನೆ ಮಾಡಬೇಕಿದೆ ಎಂದರು. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಜಿ.ಅಡವಿರಾವ್, ರಾಜ್ಯ ಕಾರ್ಯದರ್ಶಿ ಎಂ.ಗಂಗಾಧರ, ಹನುಮೇಶ, ಹನುಮಂತಪ್ಪ, ಮರಿ ಲಿಂಗಪ್ಪ, ನಾಗಮ್ಮ, ರಾಮಯ್ಯ, ಶರಣಪ್ಪ, ಬಸವರಾಜ ನಾಯಕ, ಚಂದ್ರಶೇಖರ, ಡಿ.ಕೆ. ಲಿಂಗಸೂಗುರು, ರಮೇಶ, ಮಹಿಬೂಬ್ ಸಾಬ್, ನಾಗಭೂಷಣ, ಶಂಕ್ರಪ್ಪ, ಸೇರಿದಂತೆ ಅನೇಕ ಕಾರ್ಮಿಕರು ಭಾಗವಹಿಸಿದ್ದರು.

## ತುಂಗಭದ್ರ ನೀರಾವರಿ ಕಾರ್ಮಿಕರ ಬೇಡಿಕೆಗಳಿಗೆ ಆಗ್ರಹಿಸಿ ಯರಮರಸ್ ನೀರಾವರಿ ಕಚೇರಿ ಮುಂದೆ ಪ್ರತಿಭಟನೆ

ಕಳೆದ ಹಲವು ವರ್ಷಗಳಿಂದ ತುಂಗಭದ್ರಾ ಎಡ ಮತ್ತು ಬಲ ದಂಡೆ ಕಾಲುವೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರನ್ನು ಡ್ಯಾಮ್ ಕ್ರಸ್ಟ್‌ಗೇಟ್ ಕಾಮಗಾರಿಯ ನೆಪದಲ್ಲಿ ಕೆಲಸದಿಂದ ತೆಗೆಯುತ್ತಿರುವುದನ್ನು ಸಂಘ ತೀವ್ರವಾಗಿ ಖಂಡಿಸಿದೆ. ಕೆಲಸ, ನೀರು ಹಾಗೂ ಅನುದಾನ ಇದ್ದರೂ ಕಾರ್ಮಿಕರನ್ನು ಕೆಲಸದಿಂದ ತೆಗೆವುದು ಕಾರ್ಮಿಕ ಕಾಯ್ದೆಗಳ ಉಲ್ಲಂಘನೆಯಾಗಿದೆ ಎಂದು ಆರೋಪಿಸಿದರು.

ಉಪ ಕಾರ್ಮಿಕ ಆಯುಕ್ತರ ನೇತೃತ್ವದಲ್ಲಿ ನಡೆದ ಜಂಟಿ ಸಂಧಾನ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಇನ್ನೂ ಜಾರಿಗೆ ತರದೇ ಇರುವುದನ್ನು ಸಂಘ ಗಂಭೀರವಾಗಿ ಪರಿಗಣಿಸಿದೆ. ಸಭೆಯ ಪ್ರಕಾರ ಕಾರ್ಮಿಕರಿಗೆ ನಿರಂತರ ಕೆಲಸ ಹಾಗೂ ಉದ್ಯೋಗ ಭದ್ರತೆ ನೀಡಬೇಕು ಎಂಬ ನಿಯಮಗಳನ್ನು ತಕ್ಷಣ ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಇದಲ್ಲದೆ, ಟೆಂಡರ್ ಪ್ರಕ್ರಿಯೆಯಲ್ಲಿ ಆಗುತ್ತಿರುವ ವಿಳಂಬವೇ ವೇತನ ಪಾವತಿಯಲ್ಲಿ ವಿಳಂಬಕ್ಕೆ ಕಾರಣವಾಗುತ್ತಿದೆ ಎಂದು ಸಂಘ ಆರೋಪಿಸಿದೆ. ಟೆಂಡರ್ ಅವಧಿ ಮುಗಿಯುವ ಮುನ್ನವೇ ಪ್ರಕ್ರಿಯೆ ಪೂರ್ಣಗೊಳಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಲಾಯಿತು.

ಕಾರ್ಮಿಕರಿಗೆ ಕನಿಷ್ಠ ವೇತನ, ಇಎಸ್‌ಐ, ಪಿಎಫ್ ಸೇರಿದಂತೆ ಎಲ್ಲಾ ಕಾನೂನುಬದ್ಧ ಸೌಲಭ್ಯಗಳನ್ನು ಕಡ್ಡಾಯವಾಗಿ ಜಾರಿಗೆ ತರಬೇಕು. 26 ದಿನಗಳ ವೇತನ ಪಾವತಿ ಗೊಂದಲವನ್ನು ಸರಿಪಡಿಸಿ, ಕಡಿತಗೊಳಿಸಿದ ವೇತನವನ್ನು ತಕ್ಷಣ ಪಾವತಿಸಬೇಕು ಎಂದು ಸಂಘ ಆಗ್ರಹಿಸಿದೆ. ಹಿಂದಿನ ವೇತನ ವ್ಯತ್ಯಾಸದ ಮೊತ್ತವನ್ನು ಕೂಡ ಕಾರ್ಮಿಕರ ಖಾತೆಗೆ ಜಮಾ ಮಾಡಬೇಕು ಎಂದು ತಿಳಿಸಿದರು.

ಸಂಘವು ಮತ್ತಷ್ಟು ಸ್ಪಷ್ಟಪಡಿಸಿದ್ದು, ಕಾಲುವೆ ನಿರ್ವಹಣೆ ಸೇರಿದಂತೆ ವಿವಿಧ ಕೆಲಸಗಳನ್ನು ಗುತ್ತೇದಾರರಿಗೆ ನೀಡುವ ಬದಲು ಕಾರ್ಮಿಕರಿಗೆ ನೀಡಬೇಕು. ಸರ್ಕಾರ ಮತ್ತು ಕಾರ್ಮಿಕ ಇಲಾಖೆಯ ನಿರ್ದೇಶನಗಳನ್ನು ಪಾಲಿಸದಿದ್ದಲ್ಲಿ ಸಂಬಂಧಿಸಿದ ಅಧಿಕಾರಿಗಳು ಲಿಖಿತವಾಗಿ ಸ್ಪಷ್ಟನೆ ನೀಡಬೇಕು ಎಂದು ಎಚ್ಚರಿಸಲಾಯಿತು.

ಕಾರ್ಮಿಕರ ಪ್ರಮುಖ ಬೇಡಿಕೆಗಳನ್ನು ತಕ್ಷಣ ಈಡೇರಿಸದಿದ್ದರೆ ಕಾನೂನು ಹೋರಾಟ ಹಾಗೂ ಬೀದಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ತುಂಗಭದ್ರಾ ನೀರಾವರಿ ಕಾರ್ಮಿಕರ ಸಂಘ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ತುಂಗಭದ್ರಾ ನೀರಾವರಿ ಕಾರ್ಮಿಕರ ಸಂಘ (ಎಐಸಿಸಿಟಿಯು) ದ ಕೇಂದ್ರ ಸಮಿತಿ ಪ್ರಧಾನ ಕಾರ್ಯದರ್ಶಿ ಎಂ ಬಸವರಾಜ, ಯರಮರಸ್ ವಿಭಾಗದ ಅಧ್ಯಕ್ಷ ಸಿದ್ದಪ್ಪಗೌಡ, ಪ್ರಧಾನ ಕಾರ್ಯದರ್ಶಿ ಪ್ರಹ್ಲಾದ್ ರಾವ್, ಯರಮರಸ್ ಉಪ ವಿಭಾಗ ಅಧ್ಯಕ್ಷ ಲಕ್ಷ್ಮಣ್, ಆರ್ ಡಿ ಎಸ್ ಉಪ ವಿಭಾಗದ ಅಧ್ಯಕ್ಷ ಭೀಮಣ್ಣ ಉಡುಮಗಲ್, ಕಲ್ಲೂರು ಉಪ ವಿಭಾಗದ ಅಧ್ಯಕ್ಷ ಬಸನಗೌಡ ಕಲ್ಲೂರು, ರಾಮರೆಡ್ಡಿ ಕಲ್ಮಲಾ, ಜಲೀಲ್ ಪಾಷ, ಜಗದೀಶ್, ನಿಸಾರ್ ಅಹಮದ್, ಈರಣ್ಣ ಅನ್ವರ್, ಪರಶುರಾಮ, ಸೇರಿದಂತೆ ನೂರಾರು ಕಾರ್ಮಿಕರು ಪಾಲ್ಗೊಂಡಿದ್ದರು.

OWNER, PUBLISHER, PRINTER BY: SHYAM SUNDER L. PUBLISHED FROM: H: NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA AND PRINTED AT: KANNADA MATHRUBHOOMI PRINTERS, SHOP NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA, EDITOR BY: SHYAM SUNDER L